SRI R. GUNDU RAO.—It is not a holy profession.

MR SPEAKER.—There are some professional politicians.

SRI R. GUNDU RAO.—Now, Hon'ble Speaker says that there are professional politicians. We cannot rule out this. So, let us not now worry about that profession. My only appeal to the striking students is that let them have trust in us. Let them have trust in this House and leave it to us, The said same thing to the workers of the Public Sectors also. If they do so the matter could be discussed in a calm atmosphere and settlement could be arrived at. I once again appeal to them to call off the strike and leave the matter to us. I once again assure that permission will not be accorded to new medical colleges.

MATTER UNDER RULE 312

re : Permission accorded by the Divisional Forest Officer, Mercara to fell trees situated to Jumma Malaies.

MR. SPEAKER.—Now, we shall go to the next item of the Agenda. Sri M. C. Nanaiah will raise a matter regarding permission accorded by the Divisional Forest Officer, Mercara to fell trees situated in Jamma Malais, Survey No. 154/5 contrary to the provisions of the Karnataka Tree Protection Act in favour of one person.

ಶ್ರೀ ಎಂ. ಸಿ. ನಾನಯ್ಯ (ಮಡಿಕೇರಿ ಕ್ಷೇತ್ರ).—ಮಾನ್ಯ ಅಧ್ಯಕ್ಷರೇ, ನಾನು ರೂಲ್ ೩೧೨ರ ಕೆಳಗಡೆ ಒಂದು ವಿಷಯವನ್ನು ಕಳುಹಿಸಿದ್ದೆ. ಅದು ಇವತ್ತಿನ ಅಜೆಂಡಾದಲ್ಲಿ ಬಂದಿದೆ. ಅದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಇದರಲ್ಲಿ ಅಡಗಿರತಕ್ಕ ಒಂದು ದೊಡ್ಡದಾದ ಹಿನ್ನೆಲೆ ಯಾವುದು ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ವಿವರವಾಗಿ ತರಲು ಇಚ್ಛೆಪಡುತ್ತೇನೆ. ನಾನು ಕಳುಹಿಸಿರ ತಕ್ಕ ನೋಟೀಸಿನಲ್ಲಿ ಈ ರೀತಿ ಇದೆ.—

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

"The Divisional Forest Officer, Mercara, it is learnt has accorded permission to fell the trees from Jamma Malais bearing Survey No. 154/5 of 431-42 acres and other Survey numbers in Chelavara Village, Nopoklunad, Coorg District contrary to the Provisions and spirit of the Karnataka Tree Protection Act in favour of one Sri Emanual Rampuram. The Owners of Jamma Malais have no right over the trees standing on the said Jamma Malais and the Ownership is vested with the Government. The said land is situated in the Western Ghat of Coorg District and protection of trees all along the Western Ghat is the need of the hour to maintain the ecological balance of the State and District.

It is learnt that the total value of the Timber standing on the said land is more than Rs. 5 crores and this land is the land of the Government.

It is also learnt that attempts have been made to take the very land as Security in collusion with the Officers of the Forest Department regarding the seigniorage value of the trees standing thereon causing thereby crores of rupees loss to the Government.''

I am making this statement because I have received some further information as to who are at the back of this scandal.

ನಾನು ಇದನ್ನು ತಂದಿರತಕ್ಕ ಉದ್ದೇಶ ಏನೆಂದರೆ, ಪಶ್ಚಿಮ ಘಟ್ಟದಲ್ಲಿರುವ ಅರಣ್ಯವನ್ನು ಸರ್ಕಾರ ಸಂಪೂರ್ಣವಾಗಿ ಸಂರಕ್ಷಣೆ ಮಾಡಬೇಕು. ಇಲ್ಲದೆ ಹೋದರೆ ನಮ್ಮ ರಾಜ್ಯದಲ್ಲಿರುವ ವಾತಾವರಣವೇ ಏರುಪೇರಾಗಿರುವ ಸನ್ನಿವೇಶ ಬರುತ್ತದೆ. ಇದಕ್ಕಿಂತ ಹೆಚ್ಚಾಗಿ ಕೊಡಗು ಪ್ರದೇಶದಲ್ಲಿ ಏನಾ ವೃಷ್ಟಿಯ ಪರಿಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ, ಪಶ್ಚಿಮ ಘಟ್ಟದಲ್ಲಿರುವ ಎಲ್ಲ ಅರಣ್ಯವನ್ನ ಸಂರಕ್ಷಣೆ ಮಾಡಬೇಕೆಂದು ಹೇಳುವ ದೃಷ್ಟಿಯಿಂದ ನಾನು ಬಹಳವಾಗಿ ನೊಂದು ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿರುತ್ತೇನೆ. ಇದರಲ್ಲಿ ನಡೆದಿರತಕ್ಕ ವಿಚಾರ ಏನು ಎಂಬುದನ್ನು ನಾನು ಈಗ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಇವತ್ತಿನ ದಿವಸ, ಮರದ ವ್ಯಾಪಾರಿಗಳು ಪಶ್ಚಿಮ ಘಟ್ಟದಲ್ಲಿರುವ ಮರಗಳನ್ನು ಕಡಿದು ನಾಶ ಮಾಡಲಿಕ್ಕೆ ಹೊರಟಿದ್ದಾರೆ. ಅವುಗಳನ್ನು ಕಡಿಯಲು ಪರವಾನಿಗೆ ಕೊಟ್ಟಿರುವುದು ಕೂಡ ಅಕ್ರಮವಾಗಿದೆ. ಅಲ್ಲಿರತಕ್ಕ ಮರಗಳು ಈಗಾಗಲೇ ಒಂದು ಕೋಟಿ ೩೦ ಲಕ್ಷ ರೂಪಾಯಿಗಳಿಗೆ ಮಾರಾಟವಾಗಿದೆ. ಈ ವಿಚಾರ ಇವತ್ತು ಈ ಸದನದಲ್ಲಿ ಬರುತ್ತದೆಂದು ಗೊತ್ತಾದ ಕೂಡಲೇ ಆ ಮಾರದ ವ್ಯಾಪಾರಿಗಳು ಯಾರಿದ್ದಾರೆ ಅವರು ಈ ವಿಧಾನ ಸೌಧದ ಸುತ್ತ ಓಡಾಡುತ್ತಿದ್ದಾರೆ. ಈ ಒಂದು ರಂಗದಲ್ಲಿ ಇಬ್ಬರು ಪ್ರಮುಖ ವ್ಯಕ್ತಿಗಳು ನಮ್ಮ ಕೊಡಗಿನವರಿದ್ದಾರೆ. ಈಗಾಗಲೇ ಪಶ್ಚಿಮ ಘಟ್ಟದಲ್ಲಿದ್ದ ಶೇಕಡ ೭೦ರಷ್ಟು ಮರಗಳನ್ನು ನಾಶ ಮಾಡಿ ಆಯಿತು. ಇನ್ನು ಉಳಿದ ೩೦ರಷ್ಟು ಮರಗಳನ್ನು ಕೇರಳದ ಸ್ಮಗ್ಲರ್ಸ್ ಕೊಳ್ಳೆ ಹೊಡೆಯುತ್ತಿದ್ದಾರೆ. ಇವತ್ತು, ಕೊಡಗಿನಲ್ಲಿರುವ ಮರದ ವ್ಯಾಪಾರಿಗಳು ಯಾರಿದ್ದಾರೆ ಅವರು ಈ ವಿಷಯ ಈ ಸದನದಲ್ಲಿ ಚರ್ಚೆಗೆ ಬರುವ ವೇಳೆಗೆ ಆಗಲೇ ವಿಧಾನ ಸೌಧದ ಸುತ್ತ ಸುತ್ತುತ್ತಿದ್ದಾರೆ. ಈ ವಿಚಾರ ಅವರಿಗೆ ಹೇಗೆ ತಿಳಿಯಿತು ಎಂಬುದು ಗೊತ್ತಾಗಬೇಕಾಗಿದೆ. ಈ ವಿಚಾರ ವಿಧಾನ ಸಭೆಯಲ್ಲಿ ಚರ್ಚೆಗೆ ಬರುತ್ತದೆ ಎಂಬುದನ್ನು ಹೇಗೆ ತಿಳಿದುಕೊಂಡು ವಿಧಾನ ಸೌಧದವರೆಗೆ ಬಂದರು ಎಂಬುದು ವಿಸ್ಮಯಕಾರಕವಾಗಿದೆ. ಈ ಸಂದರ್ಭದಲ್ಲಿ ಸರ್ಕಾರ ಅವರ ಜೊತೆಯಲ್ಲಿ ಸಾಮೀಲಾಗಿದೆಯೇನೋ ಎಂಬ ಸಂಶಯ ಬಂದಿದೆ. ಆದುದರಿಂದ್ನ ಈ ವಿಷಯವನ್ನು ನಾನು ಬಹಳ ಗಂಭೀರವಾಗಿ ಈ ಸಭೆಯ ಮುಂದಿಡುತ್ತಿದ್ದೇನೆ. ಪಶ್ಚಿಮ ಘಟ್ಟದಲ್ಲಿ ಜಮ್ಮಮಲೆ ಎಂಬ ೪೭೦ ಎಕರೆಯಷ್ಟು ಅರಣ್ಯ ಪ್ರದೇಶ ಇದೆ. ಕೊಡಗಿನ ರಾಜರ ಕಾಲದಲ್ಲಿ ಕೂಡ ಆ ಪ್ರದೇಶದಲ್ಲಿ ಏಲಕ್ಕಿಯನ್ನು ಇಂಡೀಜೀನಿಯಸ್ ಮೆತಡ್‌ನಲ್ಲಾಗಲೀ ಅಥವಾ ಸೈಂಟಿಫಿಕ್ ಮೆತಡ್‌ನಲ್ಲಾಗಲಿ ಬೆಳಸುವ ಸಲುವಾಗಿಯೂ ಮರಗಳನ್ನು ಕಡಿಯಕೂಡದು ಎಂಬ ಆಜ್ಞೆಯಾಗಿತ್ತು. ರ್ಯಾಡಿಕಲ್ ಆಗಿ ಏನು ಬದಲಾವಣೆ ಮಾಡಬಾರದು ಎಂದು ಇತ್ತು. ಆದರೆ ಏಲಕ್ಕಿಯನ್ನು ಒಣಗಿಸಲಿಕ್ಕೆ ಬೇಕಾದರೆ ಅಗತ್ಯವಾದಷ್ಟು ಮಾತ್ರ ಮರಗಳನ್ನು ಕಡಿಯಬಹುದೆಂದು ಇತ್ತು. ಕಾವೇರಿಯಿಂದ ಪೆಡಿದು ಚೇಳಾವಾರುವರೆಗೆ ಇರತಕ್ಕ ಪಶ್ಚಿಮ ಘಟ್ಟದ ಒಟ್ಟು ಅರಣ್ಯ ಪ್ರದೇಶ ೩೬ ಸಾವಿರ ಎಕರೆ. ಆದರಲ್ಲಿ, ಈಗಾಗಲೇ ಸುಮಾರು ೫-೨೦ ಸಾವಿರ ಎಕರೆಗಳಷ್ಟು ಜಮೀನಿನಲ್ಲಿದ್ದ ಅರಣ್ಯವನ್ನು ಕಡಿಯಲಾಗಿದೆ. ಒಂದು ವರ್ಷಕ್ಕೆ ಕೊಡಗಿನಿಂದ ಸುಮಾರು ೨೦ ಲಕ್ಷ ಘನ ಅಡಿಗಳಷ್ಟು ಮರ ಹೋಗುತ್ತಿದೆ. ಈ ಒಂದು ಜಮ್ಮಮಲೆ ಪ್ರದೇಶ ಏನಿದೆ ಇದು ೧೯೨೬ರಲ್ಲಿ ಒಂದು ಕುಟುಂಬಕ್ಕೆ ಸೇರಿದ ಮಲೆಯಾಗಿತ್ತು. ಅವರು ಸರ್ಕಾರಕ್ಕೆ ಅದರ ಕಂದಾಯವನ್ನು ಕಟ್ಟಲಿಲ್ಲವೆಂದು ಹೇಳಿ ಅಂದು ಅದನ್ನು ಸರ್ಕಾರ ಹರಾಜು ಮಾಡಿತು. ಆ ಹರಾಜಿನಲ್ಲಿ ಆ ಮಲೆಯನ್ನು ಒಬ್ಬರು ಪಡೆದರು. ನಂತರ ಅವರಿಗೆ ಜಮಾಬಂದಿಯನ್ನು ಪರ್ಗಾವಣೆ ಮಾಡತಕ್ಕ ಕಾಲದಲ್ಲಿ ಅದು ಸರ್ಕಾರದ ಗಮನಕ್ಕೆ ಬಂದಾಗ, the Govern-

ment said that the ownership of the said land and trees vests with the Government. But, the right of the occupant of the Jammamalai is only to cultivate cardamam indigenously. ಇದು ಒಂದು ಬಿಟ್ಟರೆ ಬೇರೆ ಯಾವ ಅಧಿಕಾರವೂ ಇಲ್ಲ. ಹೀಗೆ ಜಮ್ಮಾಬಂದಿಯನ್ನು ವರ್ಗಾವಣೆ ಮಾಡಿರುವುದು ತಪ್ಪು ಎಂದು ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಗಿ ೧೯೩೧ರಿಂದ ೧೯೪೦ರ ವರೆಗೆ ಆದು ಹಾಗೇ ಇತ್ತು. ೧೯೪೦ರಲ್ಲಿ ಆ ಒಂದು ಜಮ್ಮಾಮಲೆಯಲ್ಲಿ ಮರ ಕಡಿಯಂಪ ಸಲುವಾಗಿ ಇಮಾನಿಯಲ್ ರಾಮಪುರ್ ಎಂಬುವವರು ಹಾಕಿದ ಅರ್ಜಿ ಹೈಕೋರ್ಟಿನ ಮುಂದೆ ತೀರ್ಮಾನಕ್ಕೆ ಇದೆ. ಅವರು ತಮ್ಮ ಹೆಸರಿಗೆ ಅದನ್ನು ವರ್ಗಾವಣೆ ಮಾಡಬೇಕೆಂದು ಕೇಳಿದಾಗ ಅದಕ್ಕೆ ಸರ್ಕಾರ ಅವಕಾಶ ಕೊಡದೆ ಆ ಜಮ್ಮಮಲೆ ಹಾಗೆಯೇ ಮುಂದುವರಿಯಬೇಕೆಂದು ಆಜ್ಞೆಯೊಂದನ್ನು ಹೊರಡಿಸಿತು. ಕೊನೆಗೆ ಅದು ಹಾಗೆಯೇ ಮುಂದುವರಿಯಿತು. ಅಲ್ಲಿ ಕಾಫಿಯನ್ನು ಬೆಳೆಸಕ್ತೇನೆಂದು ೧೯೫೬ರಲ್ಲಿ ಇಮಾನಿಯಲ್ ರಾಮಪುರ್‌ರವರು ಕೇಳಿದಾಗ ಅಲ್ಲಿ ಕಾಫಿಯನ್ನು ಕೂಡ ಬೆಳಸಕೂಡದು ಎಂದು ಕಾಫಿಯನ್ನು ಬೆಳೆಯಲಿಕ್ಕೆ ಕೂಡ ಸರ್ಕಾರ ಅನುಮತಿ ಕೊಡಲಿಲ್ಲ. ಕಾರಣ ಏನೆಂದರೆ. ಅಲ್ಲಿರುವ ಮರಗಳನ್ನು ಸಂರಕ್ಷಣೆ ಮಾಡಬೇಕೆಂಬುದೇ ಮುಖ್ಯ ಉದ್ದೇಶ. ಪಶ್ಚಿಮ ಘಟ್ಟದಲ್ಲಿರುವ ಮರಗಳನ್ನು ಸಂರಕ್ಷಣೆ ಮಾಡುವ ಸಲುವಾಗಿ ಅಲ್ಲಿ ಪ್ಲಾಂಟೇಷನ್ ಮಾಡಲಿಕ್ಕೆ ಅಂದಿನ ಸರ್ಕಾರ ಅನುಮತಿ ಕೊಡಲಿಲ್ಲ. ಇಮಾನಿಯಲ್ ರಾಮಪುರ್ ಎಂಬುವವರು ೧೯೭೪ರಲ್ಲಿ ಪುನಃ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಒಂದು ಅರ್ಜಿಯನ್ನು ಸಲ್ಲಿಸಿ ಜಮ್ಮಮಲೆಯಲ್ಲಿರತಕ್ಕ ಮರಗಳನ್ನು ಕಡಿಯುವುದಕ್ಕೆ ಅನುಮತಿ ಕೊಡಬೇಕೆಂದು ಕೇಳಿದರು. ಆದರೆ ಜಿಲ್ಲಾಧಿಕಾರಿಗಳು ಅದನ್ನು ನಿರಾಕರಿಸಿದರು. ಆ ಸಂದರ್ಭದಲ್ಲಿ, ಇದರ ಬಗ್ಗೆ ಅಂದಿನ ಡಿವಿಜನಲ್ ಫಾರೆಸ್ಟ್ ಅಧಿಕಾರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ.—

> "Rampuram filed an application before the Deputy Commissioner, Coorg, on 28th February 1974 for exploiting the tree growth without the payment of seigniorage value. The request was selected by the Deputy Commissioner on 15th April 1976."

ಆ ಸಂದರ್ಭದಲ್ಲಿ ಡಿವಿಜನಲ್ ಫಾರೆಸ್ಟ್ ಅಧಿಕಾರಿಗಳು ಯಾರಿಗೆ ಈ ಅರ್ಜಿಯನ್ನು ಕಳುಹಿಸಿದರೋ ಅವರು ವಿತಕ್ಕೋಸ್ಕರ ಮರಗಳನ್ನು ಕಡಿಯುವುದಕ್ಕೆ ಅನುಮತಿಯನ್ನು ಕೊಡಬಾರದೆಂದು ಕೇಳಿ ಜಿಲ್ಲಾಧಿಕಾರಿಗಳಿಗೆ ೫-೯-೭೬ ರಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಅದು ಈ ರೀತಿ ಇದೆ :

> "In this respect further I write to state that in view of the fact that the land is situated under the heavy rainfall in Western Ghat, it may not be conducive to remove the tree growth".

ಯಾವಾಗ ಜಿಲ್ಲಾಧಿಕಾರಿಗಳು ಮತ್ತು ಅರಣ್ಯ ಅಧಿಕಾರಿಗಳು ಮರಗಳನ್ನು ಕಡಿಯಂವುದಕ್ಕೆ ಅನುಮತಿ ಕೊಡಲಿಲ್ಲವೋ ಆಗ ಇಮಾನಿಯಲ್ ರಾಮಪುರ್‌ರವರು, preferred an appeal before the Karnataka Revenue Appellate Tribunal seeking for permission to exploit the tree growth. His appeal was rejected even in the Revenue Appellate Tribunal also. ಇದಾದ ಮೇಲೆ ಅವರು ಒಂದು ಸ್ಯೂಟನ್ನು ಫೈಲ್ ಮಾಡಿದರು. ಸರ್ಕಾರದವರು ಎಲ್ಲಿಯವರೆಗೆ ಸರ್ಕಾರೀ ವಕೀಲರನ್ನು ಬದಲಾವಣೆ ಮಾಡುವುದಿಲ್ಲ ಅಲ್ಲಿಯವರೆಗೆ ಯಾವುದೇ ಸರ್ಕಾರಿ ಕೇಸುಗಳಿಗೂ ಜಯ ಸಿಗುವುದಿಲ್ಲ ಎಂಬುದನ್ನು ಮಾನ್ಯ ಕಾನೂನು ಮಂತ್ರಿಗಳು ಇದ್ದಾಗಲೇ ಅವರ ಗಮನಕ್ಕೆ ತರುತ್ತಾ. ಇದಕ್ಕೆ ಅವರು ಉತ್ತರ ಕೊಡಬೇಕೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಾನೂ ಕೂಡ ವಕೀಲ ವೃತ್ತಿಗೆ ಸೇರಿದವನೆ. ಸರ್ಕಾರೀ ವಕೀಲರು ಸರ್ಕಾರದ ಕೇಸುಗಳನ್ನು ವಾದ ಮಾಡುಂತ್ತಿಲ್ಲ. ಹಾಗಾದರೆ, ಯಾರ ಕೇಸುಗಳನ್ನು ವಾದ ಮಾಡುತ್ತಿದ್ದಾರೆಂದರೆ, ವಿರೋಧ ಪಕ್ಷದವರ ಜೊತೆ ಸೇರಿಕೊಂಡು ಹಣ ಪಡೆದು ಕೇಸುಗಳಿಗೆ ಸರಿಯಾಗಿ ಹಾಜರಾಗದೆ ಎಕ್ಸ್‌ಪಾರ್ಟೆ ಡಿಸಿಷನ್ ಆಗಿರುವುದು ತಮ್ಮ ಗಮನಕ್ಕೆ ಬಂದಿರಬಹುದು.

4-30 ಪಿ.ಎಂ.

ಇದಾದ ಮೇಲೆ he filed a suit in the Court. ನಾನು ಹೇಳುತ್ತೇನೆ, ಎಲ್ಲಿಯವರೆಗೆ ಸರ್ಕಾರದವರು ಈಗಿರತಕ್ಕ ಸರ್ಕಾರೀ ವಕೀಲರನ್ನು ಬದಲಾವಣೆ ಮಾಡುವುದಿಲ್ಲವೋ ಆಲ್ಲಿಯವರೆಗೆ ಸರ್ಕಾರದ ಯಾವುದೇ ಕೇಸಿನಲ್ಲಿ ಜಯ ಸಿಗುವುದಿಲ್ಲವೆಂಬ ಮಾತನ್ನು ಕಾನೂನು ಮಂತ್ರಿಯವರ ಎದುರು ಗಡೆಯೇ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಾನೂ ಕೂಡ ವಕೀಲಿ ವೃತ್ತಿಗೆ ಸೇರಿದವನು. ಇವತ್ತು ಸರ್ಕಾರೀ ವಕೀಲರುಗಳು ಸರ್ಕಾರದ ಕೇಸನ್ನು ವಾದನಾಡುತ್ತಿಲ್ಲ. ಇವತ್ತು ಯಾರ ಕೇಸನ್ನು ವಾದ ಮಾಡುತ್ತಿದ್ದಾರೆಂದರೆ ವಿರೋದ ಪಕ್ಷದವರ ಜೊತೆ ಸೇರಿಕೊಂಡು ಅವರ ಕೈಯಿಂದ ಹಣವನ್ನು ಪಡೆದುಕೊಂಡು ಕೇಸ್ ಇದ್ದಾಗ ಆದಕ್ಕೆ ಹಾಜರಾಗದೇ ಎಕ್ಸ್‌ಪಾರ್ಟಿ ಡಿಸಿಷನ್ ಆಗುವಂತೆ ಮಾಡುತ್ತಿದ್ದಾರೆ. ಈ ರೀತಿ ಆಗಿರುವುದು ತಮ್ಮ ಗಮನಕ್ಕೆ ಬಂದಿರಬಹುದು. ಆಮೇಲೆ ಇದರ ಬಗ್ಗೆ ಏನು ನಡೆಯಿತು ಎಂಬುದನ್ನು ಕೂಲಂಕುಷವಾಗಿ ಹೇಳುತ್ತೇನೆ. ಶ್ರೀ ಇಮ್ಮಾನುಯಲ್ ರಾಮಪುರ್ ಎಂಬುವರು ಜಮ್ಮಾಮಲೈ ಯಾವುದಿದೆ, ಯಾವುದನ್ನು ಅವರು ಖರೀದಿ ಮಾಡಿದ್ದರು ಅವರ ಮೇಲೆ ಮತ್ತು ಆಲ್ಲಿರುವ ಮರದ ಮೇಲೆ ನನಗೆ ಹಕ್ಕಿದೆ, ಆದ್ದರಿಂದ ನನಗೆ ಸಂಪೂರ್ಣ ಹಕ್ಕನ್ನು ಕೊಡಿಸಬೇಕು ಎಂದು ಮಡಿಕೇರಿಯ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ದಾವಾ ದಾಖಲಿ ಮಾಡಿದ್ದರು. ದಾವೆ ನಂಬರ್ ಒ.ಎಸ್. ೪-೧೯೭೮ ನಂತರ ಕೋರ್ಟಿನವರು ಜಮ್ಮಾಮಲೈ ಮೇಲಾಗಲೀ, ಆದರಲ್ಲಿರತಕ್ಕ ಮರಗಳ ಮೇಲಾಗಲೀ, ಆದರಲ್ಲಿರತಕ್ಕ ಮಣ್ಣಿನ ಮೇಲಾಗಲೀ ಅವರಿಗೆ ಅಧಿಕಾರ ಇಲ್ಲ ಆದ್ದರಿಂದ ದಾವೆಯನ್ನು ತಿರಸ್ಕಾರ ಮಾಡಿದ್ದೇವೆ ಎಂದು ತೀರ್ಪು ಕೊಟ್ಟರು. ಸರ್ಕಾರ ಅಂದು ಈ ದಾವೆಯನ್ನು ಹಾಕತಕ್ಕ ಸಂದರ್ಭದಲ್ಲಿ ರಿಟನ್ ಸ್ಟೇಟ್‌ಮೆಂಟನ್ನು ಕೋರ್ಟಿನಲ್ಲಿ ಹಾಕಿದ್ದರು. ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

It reads thus :

> "(i) that the Jamma Malegars possess no proprietory right in the Jamma Males".

ಸ್ವಾಮಿ, ರೆವಿನ್ಯೂ ಸೆಟ್ಲ್‌ಮೆಂಟಿನಲ್ಲಿ ಜಮ್ಮಾಮಲೈದಾರಿಗೆ ಏನು ಹಕ್ಕಿದೆ ಎಂಬುದನ್ನು ೧೯೦೫ನೇ ಇಸವಿಯಲ್ಲಿ Sri Davinson, the then Chief Commissioner of Coorg ಅವರಿಲಿನಲ್ಲಿ ಡಿಸೈಡ್ ಮಾಡಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

> "(ii) that by virtue of a grant made by the Coorg Rajas, they possess the right to cultivate Cardamoms therein according to the indigenous method which may be improved but not radically altered ;
>
> (iii) that they have no right to minor forest produce therein except in so far as relates to the use of canes, wates, nettipai and kuvale leaves, creepers and fibres for purposes ancillary to cardamom cultivation.
>
> (iv) that they possess no right to shoot within the malais or the reserved forests....."

ಮಂಲೈಗೆ ಹೋಗಬೇಕಾಗಿದ್ದರೆ ಅದಕ್ಕೆ ಡಿಫೈನ್ಡ್ ರೂಟ್ಸ್ ಉಂಟು. ಆ ರೂಟ್ಸ್‌ನಲ್ಲಿ ಮಾತ್ರ ಹೋಗ ಬೇಕು. ಕೊನೆಗೆ ಸರ್ಕಾರ ಏನು ಹೇಳಿಕೆ ಕೊಟ್ಟಿತು ಎಂದರೆ

> "The tenure of the Jama Malai will not change into sagu when such malais are alienated. Jama malais are not private or privileged holdings. The name 'Jamma Malai' is a nomenclature for that part of a Reserve Forest, when the

Malegar has only right of cultivating cardamom. The 'Jamma Malegar' has no proprietory right over the land or the timber growth therein....."

ಹೀಗೆ ಒಂದು ರಿಟೆನ್ ಸ್ಟೇಟ್‌ಮೆಂಟನ್ನು ಕೋರ್ಟಿನಲ್ಲಿ ಹಾಕಿ ಇದರ ಆಧಾರದಮೇಲೆ ಚರ್ಚೆ ನಡೆದು ಒ.ಎಸ್. ನಂಬರ್ ೪-೧೯೭೮ರಲ್ಲಿ ನನಗೆ ಅಧಿಕಾರ ಇದೆ ಎಂದು ಏನು ಅರ್ಜಿ ಹಾಕಿದ್ದ ಅದು ಡಿಸ್‌ಮಿಸ್ ಆಯಿತು. ಈ ಆಜ್ಞೆ ಮೇಲೆ ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟಿಗೆ ಇಮ್ಯಾನುಯಲ್ ರಾಮಪುರ್ ಅಪೀಲ್ ಹಾಕಿದ. ಕೋರ್ಟಿನಲ್ಲಿ ಅಪೀಲ್ ಹಾಕಿದಾಗ ಕೆಲವು ಪುರಾವೆಗಳನ್ನು ಒದಗಿಸಿದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಅದನ್ನು ಸ್ಪಷ್ಟವಾಗಿ ತಮಗೆ ಹೇಳುತ್ತಿದ್ದೇನೆ. ಆದರೆ ಡಿಸ್ಟ್ರಿಕ್ ಜಡ್ಜ್ ಕೋರ್ಟಿನಲ್ಲಿ ಏನು ಹೇಳಿದರು ಎಂದರೆ ಅವನು ಇದನ್ನು ಆಕ್ಷನ್‌ನಲ್ಲಿ ಪರ್ಚೇಸ್ ಮಾಡಿದ್ದರಿಂದ ಮಲೈ ಮೇಲೆ ಮಾತ್ರವಲ್ಲ ಈ ಒಂದು ಮರದ ಮೇಲೂ ಅವನಿಗೆ ಹಕ್ಕಿದೆ ಎಂಬ ತೀರ್ಪನ್ನು ಕೊಟ್ಟರು. ಈ ತೀರ್ಪು ಕೊಟ್ಟಮೇಲೆ ಸರ್ಕಾರ ಈ ತೀರ್ಪಿನ ವಿರುದ್ಧ ಹೈಕೋರ್ಟಿಗೆ ರೆಗ್ಯುಲರ್ ಸೆಕೆಂಡ್ ಅಪೀಲನ್ನು ಸಲ್ಲಿಸಿತು. ರೆಗ್ಯುಲರ್ ಅಪೀಲ್ ನಂಬರ್ ೪೬೬-೧೯೮೦. This is where the Hon. Law Minister may come into the picture. ಮಾನ್ಯ ಅಧ್ಯಕ್ಷರೇ, ಯಾವ ಒಂದು ಕೇಸನ್ನು ಕೋರ್ಟ್ ವಜಾ ಮಾಡುತ್ತದೆ ಅದರ ಮೇಲೆ ಸರ್ಕಾರ ಅಪೀಲ್ ಮಾಡುವ ಕಾಲಕ್ಕೆ ಅದರಲ್ಲೂ ಕೆಳಗಿನ ಕೋರ್ಟಿನಲ್ಲಿ ಸರ್ಕಾರ ಕೇಸ್ ಗೆದ್ದಿದೆ, ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸರ್ಕಾರ ಸೋತಿದೆ, ರೆಗ್ಯುಲರ್ ಸೆಕೆಂಡ್ ಅಪೀಲನ್ನು ಹೈಕೋರ್ಟಿನಲ್ಲಿ ಅಪೀಲ್ ಹಾಕಿದ ಮೇಲೆ ಕೆಳಗಿನ ಕೋರ್ಟಿನ ಜಡ್ಜ್‌ಮೆಂಟ್ ಯಾವುದಿದೆ ಅದಕ್ಕೆ ವ್ಯತಿರಿಕ್ತವಾದ ಜಡ್ಜ್‌ಮೆಂಟನ್ನು ಡಿಸ್ಟ್ರಿಕ್ ಕೋರ್ಟ್ ಕೊಟ್ಟಿರುವುದಕ್ಕೆ ಸರ್ಕಾರ ಸ್ಟೇ ಕೇಳಬೇಕೇ ಬೇಡವೇ ಎಂದು ಕೇಳುತ್ತಿದ್ದೇನೆ. Sir, when in the ordinary course of things, when the Government has won in the lower Court, the Government preferred the regular second Appeal before the Hon'ble High Court, I want to know, whether an application has been made for the stay of the judgement and decree of the District Court. ಯಾವುದೇ ಒಂದು ಅಪ್ಲಿಕೇಷನ್ ಹಾಕಿದರೆ, ಇದು ಸರ್ಕಾರದ ಜಾಗ. ಕೆಳಗಿನ ಕೋರ್ಟಿನಲ್ಲಿ ನಾವು ಗೆದ್ದಿದ್ದೇವೆ, ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸೋತಿದ್ದೇವೆ, ಮತ್ತೆ ರೆಗ್ಯುಲರ್ ಸೆಕೆಂಡ್ ಅಪೀಲನ್ನು ಹಾಕಿದ್ದೇವೆ. ದಯವಿಟ್ಟು ತಾವು ಸ್ಟೇ ಕೊಡಬೇಕು ಎಂದು ಹೈಕೋರ್ಟನ್ನು ಕೇಳಿದ್ದರೆ ಖಂಡಿತ ಹೈಕೋರ್ಟು ಸ್ಟೇ ಕೊಡುತ್ತಿತ್ತು. ಐ.ಎ ನಂಬರ್ ೧ ಯಾವುದು ಹಾಕಬೇಕಾಗಿತ್ತೋ, ಐ.ಎ. ನಂಬರ್ ೧ ಬೇರೆ, ಆದನ್ನು ನಾನು ತಿಳಿಸುತ್ತೇನೆ. ಸರ್ಕಾರ ಅರ್ಜಿ ಹಾಕಿ ಡಿಸ್ಟ್ರಿಕ್ಟ್ ಕೋರ್ಟ್ ಜಡ್ಜ್‌ಮೆಂಟ್ ಡಿಕ್ರಿಯನ್ನು ಏತಕ್ಕೆ ಸ್ಟೇ ಮಾಡಿಸಲಿಲ್ಲ? ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹೈಕೋರ್ಟಿಗೆ ಅಪೀಲ್ ಹಾಕಲಿಕ್ಕೇ ಕೂಡದು ಎಂಬ ಬಗ್ಗೆ ಕೂಡ ಕೆಲವು ಕಾರ್ಯಕ್ರಮಗಳು ನಡೆದಿತ್ತು. ಹಾಸನ ಕೇಸ್ ನಡೆದಿತ್ತು. ಹಾಸನ ಕೇಸ್ ಬಗ್ಗೆ ನಾನು ಹೇಳಿದ್ದೆ, This is not a fit case for appeal ಎಂದು. ಆ ತರಹ ಎಲ್ಲಾ ನಡೆದಿತ್ತು. ಒಂದೂವರೆ ಕೋಟಿ ರೂಪಾಯಿ ಅಲ್ಲ, ಮೂರು ಕೋಟಿ ರೂಪಾಯಿ ವ್ಯವಹಾರ ಅದು ೨೫ ಲಕ್ಷ ೫೦ ಲಕ್ಷ ರೂಪಾಯಿ ಕೊಡುವುದಕ್ಕೆ ಬೇಕಾದಷ್ಟು ಜನ ತಯಾರಾಗಿದ್ದರು. ಈ ಕೇಸಿನಲ್ಲಿ (ಆರ್. ಎಸ್. ಎ. ೪೬೬ ೧೯೮೦) ಅರ್ಜಿ ಸಲ್ಲಿಸಲಿಲ್ಲ. ಇಮ್ಯಾನುಯಲ್ ರಾಮಪುರ್ ಹೈಕೋರ್ಟಿಗೆ ಅರ್ಜಿ ಹಾಕಿದ. ಐ.ಎ. ನಂಬರ್ ೧ ಹಾಕಿದ. ಜಮ್ಮಾಮಲೈನಲ್ಲಿರತಕ್ಕ ಮರಗಳನ್ನು ಕಡಿಯಬಹುದೆಂದು ನೀವು ಹುಕ್ಕುಂ ಕೊಡಬೇಕು ಎಂದು. ಸ್ವಾಮಿ ಯಾವ ಸರ್ಕಾರ ಇದು ನಮಗೆ ಸೇರಿದಂಥ ಮರ.....

SRI Y. RAMAKRISHNA.—Sir, the matter is pending before the Court in regular second appeal, and therefore, I do not think that it is a good convention to have discussion here on a matter which is before the Court. I request the hon. Member to please give it to me in writing so that I ill conduct an inquiry into the matter. This is my suggestion. ಆಕಸ್ಮಾತ್ ನಡೆದಿದ್ದರೆ ಅದನ್ನು ರೈಟಿಂಗ್‌ನಲ್ಲಿ ಕೊಡಿ.

ಶ್ರೀ ಎಂ.ಸಿ. ನಾಣಯ್ಯ.—ನಾನು ಪೂರ್ತಿ ಪುರಾವೆಗಳನ್ನು ನಿಮಗೆ ಒದಗಿಸಿ ಕೊಡುತ್ತಿದ್ದೆ. ನಾನು ಕೊಡಗಿಗೆ ಹೋಗಿದ್ದೆ. ಆಗ ಯಾರೋ ಹೇಳಿದರು, ಸರ್ಕಾರದ ಆಸ್ತಿಯನ್ನು ಸರ್ಕಾರಕ್ಕೇ ಜಾಮೀನು ಕೊಟ್ಟು ಮರಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಹೊರಟಿದ್ದಾರೆ ಎಂದು. ಇದನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ ನಾನು ಮೂರು ದಿವಸ ಕೋರ್ಟಿನಲ್ಲಿ ಕೂರಬೇಕಾಯಿತು. ಜನರು ನನ್ನನ್ನು 'ಏನು ಸ್ವಾಮಿ ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡುವುದಕ್ಕೆ ಬಂದಿದ್ದೀರಾ' ಎಂದು ಕೇಳುವುದಕ್ಕೆ ಪುರು ಮಾಡಿದರು. ಆದಕ್ಕೆ ನಾನು ಎಷ್ಟು ದಿವಸ ಇರುತ್ತೇನೋ ಗೊತ್ತಿಲ್ಲ, ಕಪ್ಪು ಕೋಟು ಹಾಕಬೇಕು ಎಂದು ತೀರ್ಮಾನ ಮಾಡಿದ್ದೇನೆ ಎಂದು ಹೇಳಿ ತಪ್ಪಿಸಿಕೊಂಡು ಬಂದೆ, ಹಾಗೆ ಮಾಡಿ ಪುರಾವೆಗಳನ್ನು ಪಡೆದುಕೊಂಡು ಬಂದೆ. ಮರಗಳನ್ನು ಕಡಿಯಬೇಕು ಎಂದು ಆವನು ಐ.ಏ. ನಂಬರ್ ೧ ಹಾಕಿದಾಗ ಸರ್ಕಾರೀ ವಕೀಲರು ಏತಕ್ಕೆ ಆಕ್ಷೇಪಣೆ ಎತ್ತಲಿಲ್ಲ? ವೆಸ್ಟರನ್ ಘಾಟ್‌ನಲ್ಲಿ ಇರತಕ್ಕ ಅರಣ್ಯಗಳನ್ನು ಕಡಿಯಬಾರದು ಎಂದು ೧೦೦ ವರ್ಷದಿಂದ ಕಾಪಾಡಿಕೊಂಡು ಬಂದಿದ್ದೇವೆ. ಇಂಥ ಅರಣ್ಯದಲ್ಲಿ ಮರ ಗಳನ್ನು ಕಡಿಯುವುದಕ್ಕೆ ಅವನು ಅರ್ಜಿ ಹಾಕಿದಾಗ ಸರ್ಕಾರೀ ವಕೀಲರು ಏತಕ್ಕೆ ಆಬ್ಜೆಕ್ಷನ್ ಪೈಲಾ ಮಾಡ ಲಿಲ್ಲ? ಅವನು ಐ.ಎ. ನಂಬರ್ ೧ ಹಾಕಿದಾಗ ಸರ್ಕಾರೀ ವಕೀಲರನ್ನು ಕೇಳಿಯೇ ಹಾಕಿದ್ದಾನೇನೋ ಎಂಬ ಸಂಶಯ ನನಗೆ ಈಗ ಬಂದಿದೆ. ಒಟ್ಟಿನಲ್ಲಿ ಅಲ್ಲೂ ಕೂಡ ಆಕ್ಷೇಪಣೆ ಎತ್ತಲಿಲ್ಲ. ಆಕ್ಷೇಪಣೆ ಎತ್ತ ದಿದ್ದರೆ ಹೈಕೋರ್ಟ್ ಏನು ಮಾಡುತ್ತದೆ, ಏನು ಮಾಡುತ್ತಾರೆ? I have no objection. Yes granted ಎಂದು ಹೇಳುತ್ತಾರೆ. IA No. 1 was allowed. The High Court passed the orders directing the authorities to accord the permission to fell the trees subject to the condition that he should furnish security to the extent seniorage value determined by the StateGovernment. ಸ್ವಾಮಿ ಮಾನ್ಯ ಮಾದೇಗೌಡರಿಗೆ ಎಲ್ಲಾ ವಿಷಯ ಗೊತ್ತಿರುವುದರಿಂದ ಅವರಿಗೆ ಹೇಳುತ್ತಿದ್ದೇನೆ ತಾವು ಅರಣ್ಯ ಮಂತ್ರಿಯಾಗಿ ಇದನ್ನು ಸರಿ ಮಾಡುವುದಕ್ಕೆ ಆಗದೇ ಹೋದರೆ, ಕಾನೂನು ಮಂತ್ರಿಯಾಗಿ ತಾವು (ಶ್ರೀ ವೈ. ರಾಮಕೃಷ್ಣ ಅವರು) ಇದನ್ನು ಸರಿ ಮಾಡದೇ ಹೋದರೆ, ನಾನು ಶಾಸನಸಭೆಯಲ್ಲಿ ಈ ವಿಷಯವನ್ನು ಎತ್ತಿ ಅರಣ್ಯ ಸಂರಕ್ಷಣೆ ಮಾಡುವುದಕ್ಕೆ ಆಗದೇ ಇದ್ದರೆ ದೇವರೇ ನಮ್ಮನ್ನೆಲ್ಲಾ ಕಾಪಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಹೇಳುವುದೆಲ್ಲಾ ಅಪರಿಗೆ ಅರಣ್ಯರೋದನವಾಗಿ ಕಂಡು ಬರುತ್ತಿದೆ.

ಶ್ರೀ ಎಂ.ಸಿ. ನಾಣಯ್ಯ.—ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳುವುದನ್ನು ನಾನು ಒಪ್ಪಿ ಕೊಳ್ಳುವುದಿಲ್ಲ. ಕಾರಣ ಅವರು ಮತ್ತು ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಹಲವಾರು ಕಡೆ ಟೂರ್ ಮೊಡಿ ಬಂದಾಗ ನನಗೆ ತಿಳಿದುಬಂತು, ಅವರಿಗೆ ಸ್ವಲ್ಪಮಟ್ಟಿಗೆ ನೀತಿ ನಿಯತ್ತು ಇದೆ. ಆದರೆ ಯಾವ ಕಾರಣದಿಂದ ಆ ನೀತಿ ನಿಯತ್ತನ್ನು ಬಿಟ್ಟು ಇನ್ನೊಂದು ಜಾಗಕ್ಕೆ ಹೋದರೋ ಆದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಆಡ್ಮಿನಿಸ್ಟ್ರೇಷನ್ ವಿಷಯದಲ್ಲಿ in the matter of administration, I certainly say with all emphasis at my command, he takes up of an issue ಸ್ವಾಮಿ, ಅವನು ಐ.ಎ. ನಂಬರ್ ೧ ಹಾಕಿದಾಗ ಏತಕ್ಕೆ ಆಕ್ಷೇಪಣೆ ಎತ್ತಲಿಲ್ಲ ಎಂದು ನಾನು ಸರ್ಕಾರವನ್ನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ಆಕ್ಷೇಪಣೆ ಎತ್ತದೇ ಇರುವುದರಿಂದ ಹೈಕೋರ್ಟು ಆ ರೀತಿ ಆರ್ಡರ್ ಮಾಡಿತು. "Subject to the petitioner giving security to the satisfaction of the trial Cout regarding the senio age value to be determined by the State Government" ಮರ ಕಡಿಯಬೇಕಾದರೆ ಸೀನಿಯರೇಜ್ ವ್ಯಾಲ್ಯೂ ಕೊಡಲೇಬೇಕು. ಅದಾದಮೇಲೆ ಕೊನೆಯಲ್ಲಿ ಏನಾಯಿತು ಎಂದರೆ ಈ ಭೂಪತಿ ಇದ್ದನಲ್ಲ ಇಮ್ಮಾನ್ಯುಯಲ್‌ರಾಮಪುರ್, ಇವನು ಆ ಮರವನ್ನು ಟಿ.ಜಾನ್ ಎಂಬುವರಿಗೆ ಮಾರಿದ. Sri T. John is the Power of Attorney Holder ಹೈಕೋರ್ಟ್ ಆರ್ಡರ್ ಆದಮೇಲೆ ಅಲ್ಲಿ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಒಂದು ಅರ್ಜಿಯನ್ನು ಅವನು ಸಲ್ಲಿಸಿದ. Stating that "For the reasons set out and sworn to in affidavit accompanying this application, petitioner prays

that the Court may be pleased to take security as provided in I.A.No. I in RSA 466/80 on the file of the High Court of Karnataka. The petitioner is hereby tendering the scheduled properties as security and it is sufficient to cover the sen orage amount paynble in respect of the timber to be removed as per the order. ಯಾವುದನ್ನು ಸೆಕ್ಯೂರಿಟಿ ಕೊಟ್ಟ ಎಂದರೆ ಸರ್ಕಾರ ಯಾವ ಜಾಗವನ್ನು ನನ್ನದು ಎಂದು ಹೇಳಿತ್ತು, ಆದೇ ಜಾಗವನ್ನು ಸೆಕ್ಯೂರಿಟಿ ಕೊಟ್ಟ. ಯಾವ ಜಾಗವನ್ನು ಸರ್ಕಾರ ನನ್ನದು ಎಂದು ಹೈಕೋರ್ಟಿನಲ್ಲಿ ಅಪೀಲ್ ಹಾಕಿದೆ ಅದೇ ಸ್ಥಳವನ್ನು ಸೆಕ್ಯೂರಿಟಿ ಯಾಗಿ ಕೊಟ್ಟಿದ್ದಾನೆ. ಆ ರೀತಿ ಸೆಕ್ಯೂರಿಟಿ ಕೊಟ್ಟು ಮರ ಕಡಿಯುವುದಕ್ಕೆ ಆನುಮತಿ ಕೊಡಿ ಎಂದು ಅರ್ಜಿ ಹಾಕಿದ ಅದರ ಅಫಿಡವಿಟ್ ಇದೆ. ಮಾನ್ಯ ಪಾದೇಗೌಡರಿಗೆ ಒಂದು ವಿಷಯವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ, ನಾವೆಲ್ಲಾ ಇರಬೇಕೋ ಬೇಡವೋ ಎಂದು ಹೇಳುವ ಪರಿಸ್ಥಿತಿ ಬಂದಿದೆ. ನೋಡಿ ನೋಡಿ ನಮಗೂ ಬೇಸರವಾಗಿದೆ. ಸ್ವಾಮಿ, ಕೊಡಗನ್ನು ಫುಟ್ ಬಾಲ್ ಗ್ರೌಂಡ್ ಮಾಡುವುದಕ್ಕೆ ಹೊರಟಿದ್ದಾರೆ, ಕೊಡಗನ್ನು ಕೋಲಾರ ರಾಯಚೂರು, ಬೀದರ್ ತರಹ ಮಾಡುತ್ತಾರೆ. ಯಾರು ಇದನ್ನೆಲ್ಲಾ ಮಾಡುತ್ತಿದ್ದಾರೆಂದರೆ ಅವರ ಹೆಸರನ್ನು ಹೇಳಬೇಕು ಎಂದು ಬಾಯಿ ಬರುತ್ತದೆ. ಆದರೆ ಹಲವಾರು ಕಾರಣಗಳಿಂದ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರು ಇಲ್ಲಿಲ್ಲಾದರೂ ಸುತ್ಕಾಡುತ್ತಾ ಇರಬಹುದು ಆದಿರಲಿ. ಅವನು ಅಫಿಡವಿಟ್ ಕೊಡುವಾಗ ಏನು ಮಾಡಿದ schedule property is asubject matter ಎಂದು ಹೇಳಲಿಲ್ಲ. ಕೊಟ್ಟಾದ ಮೇಲೆ, the Court have taken it on file. Issue notices to the parties. ಎಂದು ಹೇಳಿತು, ಪಾರ್ಟಿಗಳು ಯಾರು ? ಕೊಡಗಿನ ಜಿಲ್ಲಾಧಿಕಾರಿಗಳು ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು. ಅವರಿಗೆ ನೋಟಿಸ್ ಹೋಗಬೇಕು ತಾನೆ ? ನೋಟಿಸ್ ತೆಗೆದು ಕೊಂಡರು ನಮ್ಮ ಗೌವರ್ನಮೆಂಟ್ ವಕೀಲರು. ಅವರು ನನಗೆ ದೊಡ್ಡ ಸ್ನೇಹಿತರು. He is a good friend of mine. He has been with the Govt. for the last 20 years. He has been there since 20 years. So far as his work is concerned, I have to compliment him. On 18-12-1980 Government Pleader has filed his memo of assurance on behalf of the Government. The Court posted the case to 16-1-1981 to file his objections. Government did not file objections. They took time to file objection on behalf of Deputy Commissioner. On 16-1-1981, the Government pleader prayed time to file objections and the court posted the case to 6-2-81. The Government did not file objections by that date also. The court ordered security as ordered by the High Court. on 11-2-1981 ಇದೇ ಗೌವರ್ನಮೆಂಟ್ ಪ್ಲೀಡರ್ ಸಿವಿಲ್ ಜಡ್ಜ್ ಮತ್ತು ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಕೇಸ್ ಬಗ್ಗೆ ವಾದ ಮಾಡಿ, ಇದು ನಮ್ಮ ಜಾಗ, ಇದು ನಮ್ಮ ಮರ ಎಂದು ಸರ್ಕಾರದ ಪರವಾಗಿ ವಾದ ಮಾಡಿದರು. ಏತಕ್ಕೋಸ್ಕರ ? He is offering the very same land as secuirty. We are not prepared to accept it. ಮಾನ್ಯ ಅರಣ್ಯ ಮಂತ್ರಿಗಳಿಗೆ ಇದು ಗೊತ್ತಿರಬೇಕು. ನಾನೂ ಕೂಡ ಒಂದಷ್ಟು ದಿವಸ ಅರಣ್ಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ತಾವು ಬಹಳ ದಿವಸ ಮಂತ್ರಿಗಳಾಗಿ ಇರುತ್ತೀರೆಂದು ನಾನು ನಂಬಿದ್ದೇನೆ. ನಾನಂತೂ ಪಾರ್ಟಟಮ್ರ್. ತಾವೂ ಮೀಡಿಯಂ ಟರ್ಮೋ ಆಥವಾ ಲಾಂಗ್ ಟರ್ಮೋ ಗೊತ್ತಿಲ್ಲ, ಇಲ್ಲಿ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಅಬ್ಜಕ್ಷನ್ ಹಾಕಲಿಲ್ಲ. ಏತಕ್ಕೆ ಹಾಕಲಿಲ್ಲವೆಂದು ನಾನು ಕೇಳುತ್ತಿದ್ದೇನೆ. ಈ ಕಡೆ ಏನಾಯಿತು ? ನಾನು ಫೆಬ್ರುವರಿ ೩ನೇ ತಾರೀಖು ಒಂದು ನೋಟಿಸನ್ನು ನಮ್ಮ ಕಾರ್ಯದರ್ಶಿಯವರಿಗೆ ಕೊಟ್ಟೆ.

ಶ್ರೀ ಡಿ.ಟಿ. ರಾಮಯ್ಯ,—ತಾವು ಮಂತ್ರಿಗಳಾಗಿದ್ದಾಗ ಇದೆಲ್ಲ ಗಮನಕ್ಕೆ ಬಂಗಿರಲಿಲ್ಲವೆ ?

ಶ್ರೀ ಎಂ. ಸಿ. ನಾನಯ್ಯ.—ನಾನು ಮಂತ್ರಿಯಾಗಿ ಮುಂದುವರಿದಿದ್ದರೆ ಈ ಮರದ ವ್ಯಾಪಾರಿಗಳನ್ನೆಲ್ಲ ಕರ್ನಾಟಕದಿಂದ ಹೊರಗೆ ಕಳುಹಿಸುತ್ತಿದ್ದೆ. ಅದು ಬೇರೆ ವಿಚಾರ. ಮರದ ವ್ಯಾಪಾರಿಗಳನ್ನು ಕರ್ನಾಟಕ ರಾಜ್ಯದಿಂದ ಹೊರಹಾಕಬೇಕೆಂದು ಮಾನ್ಯ ಮಾದೇಗೌಡರಲ್ಲಿ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ ಮತ್ತು ಅವರು ಹಾಗೆ ಮಾಡಿದರೆ ನಾನು ಅವರಿಗೆ ಸದಾ ಕೃತಜ್ಞನಾಗಿರುತ್ತೇನೆ.

ದಿನಾಂಕ ೩–೨–೮೧ ರಲ್ಲಿ ನಮ್ಮ ಕಾರ್ಯದರ್ಶಿಯವರಿಗೆ ಈ ಬಗ್ಗೆ ನೋಟಿಸ್ ಕೊಟ್ಟೆ. ಅದನ್ನು ಅವರು ಕೂಡಲೇ ಇಲಾಖೆಗೆ ಕಳುಹಿಸಿದರು ಅದು ಮಡಕೇರಿಗೆ ಹೋಗಿ ೬ನೇ ತಾರೀಖು ತಲುಪಿತು. ಇದರ ಬಗ್ಗೆ ವಿವರ ತಿಳಿಸಿ ಎಂದು ಆದರಲ್ಲಿತ್ತು. ನಂತರ, ನೋಟಿಸ್ ಅಲ್ಲಿಗೆ ಹೋಯಿತೆಂದು ಗೊತ್ತಾದ ಮೇಲೆ ೭ನೇ ತಾರೀಖು ಕೋರ್ಟಿಗೆ ಅರ್ಜಿ ಸಲ್ಲಿಸಿದರು. ಅದರಲ್ಲಿ ಏನಿದೆ ಎಂಬುದನ್ನು ಓದುತ್ತೇನೆ, ಅದರಲ್ಲಿ ಸೆಕ್ಯೂರಿಟಿ ಬಾಂಡ್‌ನ್ನು ಕೊಡುತ್ತೇವೆ. ಎಂದು ಹೇಳಿದ್ದರು. ೭–೨–೮೯ಕ್ಕೆ ಅವರು ಒಂದು ಬಾಂಡ್ ಕೊಟ್ಟುಬಿಟ್ಟರು. ಅದು ಯಾವ ಬಾಂಡ್ ? ಅದು ಇಲ್ಲಿದೆ. ಅದೇ ಜಾಗವನ್ನು ಅಂದರೆ ಅದರ ಬೆಲೆ ೧,೪೬,೦೦,೦೦೦ ರೂಪಾಯಿಗಳು, ಇದು ಯಾರದು ? ಸರ್ಕಾರದ ಜಮೀನು. ಇದರ ಮೌಲೀಕರಣ ಮಾಡಿದವರು ಯಾರು ? ರೆವಿನ್ಯೂ ಇನ್‌ಸ್ಪೆಕ್ಟರ್. ಮತ್ತೆ ಇಲ್ಲೂ ಕೂಡ ರೆವಿನ್ಯೂ ಇನ್‌ಸ್ಪೆಕ್ಟರ್ ಬರುತ್ತಾನೆ. ಆ ಜಾಗ ನಮ್ಮದು, ಮರ ನಮ್ಮದು ಎಂದು ಹೇಳಿದ ಮೇಲೆ ಮೌಲೀಕರಣ ಮಾಡುವುದಕ್ಕೂ ಇನ್‌ಸ್ಪೆಕ್ಟರನ್ನು ಅಲ್ಲಿಗೆ ಏತಕ್ಕೆ ಅರಣ್ಯ ಇಲಾಖೆಯವರು ಕಳುಹಿಸಿದರು ? ಆ ಜಾಗ ಎಲ್ಲಿದೆ ? ಪಶ್ಚಿಮ ಘಟ್ಟದ ಅರಣ್ಯದಲ್ಲಿದೆ. ಅಲ್ಲಿಗೆ ಹೋಗಿ ತಂಗುಬೇಕಾದರೆ ಮೂರುದಿವಸಗಳು ಬೇಕು ರೆವಿನ್ಯೂ ಇನ್‌ಸ್ಪೆಕ್ಟರ್ ೩೧–೧–೮೧ ರಂದು ' ಪಂಚಾಯ್ತುತಿದಾರರ ರೂಬು ರೂಬು ಮಹಜರು ಮಾಡುತ್ತಾನೆ. ''ಈ ಜಾಗಕ್ಕೆ ಹೋಗಿ ಪಂಚಾಯತಿದಾರರ ರೂಬು ರೂಬು ಮಹಜರು ಮಾಡಿದಲ್ಲಿ ಏಲಕ್ಕಿ ಮತ್ತು ಕಾಫಿ ತೋಟವಿರುವುದರಿಂದ ಇದರ ಬೆಲೆ ಒಂದು ಎಕರೆಗೆ ೩೮ ಸಾವಿರ ರೂಪಾಯಿಗಳೆಂದು ನಿಗದಿ ಮಾಡಿ, ಅದರ ಕ್ರಯ ಒಂದು ಕೋಟಿ ನಲವತ್ತಾರು ಲಕ್ಷ ರೂಪಾಯಿಗಳೆಂದು ಮೌಲೀಕರಣ ಮಾಡುತ್ತಾನೆ. ಹೀಗೆ ಹೇಳಿ ೩೦ನೇ ತಾರೀಖು ಪಂಚಾಯತಿ ಮಾಡಿ, ಅಂದು ಮಧ್ಯಾಹ್ನವೇ ತಹಶೀಲ್ದಾರರಿಗೆ ಕಳುಹಿಸುತ್ತಾನೆ. ಖಂಡಿತವಾಗಿ ಕಡತಗಳ ವಿಲೇವಾರಿ ಮಿಂಚಿನ ವೇಗ ವೇಗದಲ್ಲಿ ಆಗಿದ್ದರೆ ಇದೊಂದೇ. ಡಿಸ್ಟ್ರಿಕ್ಟ್ ಕಾಂಪೌಂಡಿನಲ್ಲಿ ಕುಳಿತು ಇದನ್ನು ಬರೆದರು. ಈತ ರೆವಿನ್ಯೂ ಇನ್‌ಸ್ಪೆಕ್ಟರ್, ಪಾಪ. ಬೊಮ್ಮೀನಂಗಳೇ ಬೇರೆ, ಬೊಮ್ಮೀನಂಗಳೇ ಬೇರೆ, ಅಂತೂ ಅದನ್ನು ರೆವಿನ್ಯೂ ಇನ್‌ಸ್ಪೆಕ್ಟರ್‌ರವರು ಅವತ್ತೇ ತಹಶೀಲ್ದಾರರಿಗೆ ಕಳುಹಿಸುತ್ತಾರೆ. ತಹಶೀಲ್ದಾರರು ರೆವಿನ್ಯೂ ಇನ್‌ಸ್ಪೆಕ್ಟರ್ ಬರೆದದ್ದನ್ನು ಹಾಗೆಯೇ ಶಿಫಾರಸ್ಸು ಮಾಡಿ ''ಸದರಿ ಜಾಗವನ್ನು ಪಂಚಾಯ್ತುದಾರರ ರೂಬು ರೂಬು ಅಜಮಾಯಿಸಿ ಮಾಡಿ ಕಂದಾಯ ಪರಿವೀಕ್ಷಕರು ವರದಿ ಸಲ್ಲಿಸಿರುವ ಮೇರೆ ಅಂದಾಜು ೧೨೦ ಎಕರೆ ಜಾಗದಲ್ಲಿ ದೂರ ದೂರ ಏಲಕ್ಕಿ ಗಿಡಗಳಿದ್ದು ಅಂದಾಜು ೨೮ ವರ್ಷದಿಂದ ಏಲಕ್ಕಿ ವ್ಯವಸಾಯ ಮಾಡಿರುವುದು ಕಂಡುಬರುತ್ತದೆ. ಬಾಕಿ ಉಳಿದ ೩೬೮–೩೨ ಎಕರೆಯಲ್ಲಿ ಕಾಫಿ ಕೃಷಿ ಇದ್ದು...ಸ್ವಾಮಿ, ಇಲ್ಲಿ ಕಾಫಿ ಕೃಷಿ ಮಾಡುವ ಹಾಗೇ ಇಲ್ಲ. ಅಲ್ಲಿ ಹತ್ತು ಎಕರೆಯಷ್ಟೂ ಕಾಫಿ ಇಲ್ಲ. ಇದು ನನಗೆ ಚೆನ್ನಾಗಿ ಗೊತ್ತಿರುವ ವಿಚಾರ. ನನ್ನ ಗ್ರಾಮ ಮರದೋಡ. ಅಲ್ಲಿಂದ ಒಂದು ಮೈಲಿ ದೂರಕ್ಕೆ ಬೇಲವಾರ ಗ್ರಾಮವಿದೆ. ಇದು ನನ್ನ ಕ್ಷೇತ್ರಕ್ಕೆ ಬರತಕ್ಕದ್ದು. ''...ಈ ಜಾಗದಲ್ಲಿ ಕಾಡು ಮರಗಳು ಹೆಚ್ಚಾಗಿರುವುದು ಕಂಡುಬರುತ್ತದೆ ಈ ಜಮೀನು ಎಕರೆ ಯೊಂದಕ್ಕೆ ರೂ. ೩೦,೦೦೦ ಬೆಲೆ ಬಾಳಬಹುದೆಂದು ತೀರ್ಮಾನಿಸಿರುತ್ತಾರೆ. ಕಂದಾಯ ನಿರೀಕ್ಷಕರ ವರದಿ ಮಾಡಿರುವ ಪ್ರಕಾರ ಕಾಫಿ ಹಾಗೂ ಏಲಕ್ಕಿ ತೋಟ ಒಟ್ಟು ೪೬೮–೩೨ ಎಕರೆಗೆ ೧,೪೦,೬೦,೪೦೦ ಅಂದಾಜು ಬೆಲೆ ಕಟ್ಟಿದೆ, ತಗಾದೆ ಮಾಡಿದಾಗ್ಯೂ ಇದುವರೆಗೆ ಆರ್ಜಿದಾರರು ಜಮಾ ಬಂದಿ ನಕಲು ಮತ್ತು ಜಮೀನಿನ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ. ಮುಂದಿನ ಹುಕುಂಗಾಗಿ ಕಡತವನ್ನು ಪರಾಂಬರಿಕೆಗಾಗಿ ಒಪ್ಪಿಸಿದೆ.'

ಇತ್ತ ಕಡೆ ಬಾಂಡ್ ಕೊಟ್ಟು ಬಿಟ್ಟಿದ್ದಾರೆ. ಕಂದಾಯ ಪರಿವೀಕ್ಷಕರು ಮಾಡಿರತಕ್ಕ ಶಿಫಾರಸ್ಸನ್ನು ೭ನೇ ತಾರೀಖು ಕೋರ್ಟಿಗೆ ತಂದುಕೊಟ್ಟರು. ೯ನೇ ತಾರೀಖು Bond was executed ಇಷ್ಟು ಹೊತ್ತಿಗೆ ಅರಣ್ಯ ಇಲಾಖೆಯಿಂದ ಮರಗಳ ಮೌಲೀಕರಣ ನಡೆಯಿತು. ೬೭ ಲಕ್ಷ ರೂಪಾಯಿಗಳಷ್ಟು ಮರವನ್ನು ಅರಣ್ಯ ಇಲಾಖೆಯವರು ಒಂದು ಸರ್ವೆ ನಂಬರಿನಲ್ಲಿ ಮೌಲೀಕರಣ ಮಾಡಿದರು. ೬೭ ಲಕ್ಷ ರೂಪಾಯಿಗಳಆಸ್ತಿಯನ್ನು ಒಂದು ಕೋಟಿ ೪೬ ಲಕ್ಷ ರೂಪಾಯಿಗಳ ಆಸ್ತಿಗೆ ಸರ್ಕಾರ ಜಾಮೀನು ಕೊಡುವುದೆಂದು ನನಗೆ ಗೊತ್ತಾದ ಕೂಡಲೇ ಮಡಕೇರಿಗೆ ಹೋಗಿ ಪತ್ರಿಕಾಗೋಷ್ಠಿ ಕರೆದು ಪತ್ರಿಕೆಗಳಿಗೆ ದೊಡ್ಡ ಹೇಳಿಕೆ ಕೊಟ್ಟು ''೫ ಕೋಟಿ ರೂಪಾಯಿಗಳ ಹಗಲು ದರೋಡೆ ಎಂದು ಹೇಳಿದೆ.

ಇದನ್ನು ಜಿಲ್ಲಾಧಿಕಾರಿ ಅವರ ಗಮನಕ್ಕೂ ತಂದೆ ಗಮನಕ್ಕೆ ತಂದಾಗ, ಪಾಪ, ಇದೆಲ್ಲ ಜಿಲ್ಲಾಧಿಕಾರಿಯವರ ಗಮನಕ್ಕೇ ಬಂದಿರಲಿಲ್ಲ. ನಾನು ಇದನ್ನೆಲ್ಲ ಬಿಚ್ಚುಮನಸ್ಸಿನಿಂದ ಹೇಳುತ್ತಿದ್ದೇನೆ. ಎಲ್ಲಾ ಗೌವರ್ನಮೆಂಟ್ ಪ್ಲೀಡರ್ ಮಟ್ಟದಲ್ಲೇ ನಡೆದು ಹೋಯಿತು, ಅಬ್ಜೆಕ್ಷನ್ ಹಾಕಲಿಲ್ಲ. ಬಾಂಡ್ ಕೊಡಿ ಎಂದುದಕ್ಕೆ ನೋಟಿಸ್ ಬೇಕು ಎಂದು ಹೇಳಿದರು. ಕೊಟ್ಟ ಬಾಂಡ್ ಅನ್ನು ಅಪ್ರೂವ್ ಎಂದು ಹೇಳಿದರು. ಇದೆಲ್ಲಾ ಕೋರ್ಟ್ ಅವರಣದಲ್ಲೇ ನಡೆಯಿತು, ನನ್ನ ದೀರ್ಘವಾದ ಪತ್ರಿಕಾ ಹೇಳಿಕೆಯನ್ನೂ ತಮಗೆ ಕೊಟ್ಟಿದ್ದೇನೆ, ಮತ್ತು ತಮಗೆ ಪತ್ರ ಬರೆದ ಮೇಲೆ ಜಿಲ್ಲಾಧಿಕಾರಿಯವರನ್ನೂ ಭೇಟಿ ಮಾಡಿದೆ. ಸರ್ಕಾರದ ಆಸ್ತಿಯನ್ನು ಸರ್ಕಾರಕ್ಕೇ ಜಾಮೀನು ಕೊಟ್ಟು ಸರ್ಕಾರದ ಮರವನ್ನು ಕಡಿಯುವುದೆಂದರೇನು ? ಒಂದು ಕೋಟಿ ಬೆಲೆ ಬಾಳುವ ಮರವನ್ನು ಕಡಿದ ಮೇಲೆ ಅಲ್ಲಿ ಎಕರೆಯೊಂದಕ್ಕೆ ೨೦೦ ರೂಪಾಯಿ ಬೆಲೆ ಬಾಳುವುದಿಲ್ಲ. ಅದು ಸರ್ಕಾರದ ಜಾಗ. ಆ ದುಡ್ಡನ್ನು ಯಾರಿಂದ ವಸೂಲ್ಮಾಡುತ್ತೀರಿ ? ಒಂದು ನಯಾಪೈಸೆ ಖರ್ಚು ಇಲ್ಲದೆ ಸರ್ಕಾರದ ಜಮೀನನ್ನು ಸರ್ಕಾರಕ್ಕೆ ಜಾಮೀನು ಕೊಟ್ಟು ಮರವನ್ನು ಕೊಳ್ಳೆ ಹೊಡೆಯುವ ವಿಚಾರ ಇಲ್ಲಿದೆ ಇಷ್ಟೆಲ್ಲ ಮಾಡಿರುವಾಗ, ಸರ್ಕಾರಕ್ಕೆ ಇದರಲ್ಲಿ ಶಾಮೀಲು ಆಗಿಲ್ಲವೆಂದರೆ ನಾವು ಹೇಗೆ ನಂಬುವುದು, ಸ್ವಾಮಿ ? ಯೋಚನೆ ಮಾಡಿ.

೧೮-೦೨-೮೦ ರಂದು ಜಿಲ್ಲಾಧಿಕಾರಿಯವರಿಗೆ ಏನು ಅರ್ಜಿಯನ್ನು ಸಲ್ಲಿಸಿದರೆಂದು ಹೇಳುತ್ತೇನೆ.

"Under section 151 C. P. C, the respondent prays that for the reasons stated in the annexed affidavit the Hon'ble Court be pleased to treat the security bond dated 7-2-19 81 as cancelled and direct him to execute a fresh security bond offering some other substantial immovable property without any encumbrance of furnish cashs security or bank guarantee to the extent of Rs. 70,00,000 (seventy lakhs in the interest of justice.....

ಇದಕ್ಕೆ ಜಿಲ್ಲಾಧಿಕಾರಿಯ ಅರ್ಜಿ ಹಾಕಿದ್ದಾರೆ ? ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್‌ರವರು ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

" I, U. Koraga Naik aged 36 years; Son of Venku Naik, working as Headquarters Assistant to Deputy Commissioner, in the office of the Deputy Commissioner, Kodagu District, Madikeri, do hereby solemnly affirm and state on oath as follows :—

1. I am well conversant with the facts which I am deposing here under.

2 The petitioner through his Power of Attorney holder Shri T. John, has executed a Security Bond in this case on 7-2-1981 to the extent of Rs. 70 00,000/- (Seventy Lakhs) offering the suit property in O. S. No. 4/78 on the file of this Hon'ble Court. Now the State appeal is pending in R. S. A. No. 466/80 on the file of the High Court of Karnataka Bangalore:"

ಈ ನೋಟಿಲ್ಲಾ ನನಗೆ ಸಿಗಬೇಕಾದರೆ ಬಹಳ ಕಷ್ಟಪಟ್ಟಿದ್ದೇನೆ. ಹಣವನ್ನು ಕೂಡ ಖರ್ಚು ಮಾಡಬೇಕಾಗಿ ಬಂತು. ಸರ್ಕಾರದ ಮೂರು ಕೋಟಿ ಹಣ ಉಳಿಸುವ ಬಗ್ಗೆ ಇನ್ನು ಹೆಚ್ಚು ಖರ್ಚು ಮಾಡುವುದಕ್ಕೆ ನಾನು ತಯಾರಿದ್ದೇನೆ.

"(3) I further state that the said property is subject matter of dispute in R. S. A. No. 466/80 on the file of the High Court of Karnataka. Moreover, the market value of the said property as valued by the Tahsilder, Madikari Taluk, appears to be excessive and not properly done which fact the Deputy Commissioner, Kodagu, Madikeri came to know recently, hence the delay in filing this objection.

4. It is a just and reasonable the petitioner be directed to offer either cash security or bank guarantee or execute security bond offering some other substantial immovable property other than the petitioner schedule property (Suit Property) as security and the Security bond executed by him on 7-2-1981 may be cancelled.

5. I further swear that I came to know today that one M/s B. G. Vasantha and N. S. Aiyanna has filed a suit in O. S. No. 28/81 on the file of this Hon'ble Court against the petitioner Sri Emmanuel Ramapuram and another wherein the subject matter of the suit schedule property is the same which the the petitioner has offered as security, on this ground also the security bond already executed by the petitioner is liable to be cancelled."

ಇದರ ಬಗ್ಗೆ ಇನ್ನೊಂದು ದೊಡ್ಡ ಕಥೆ ಇದೆ, ಪಾರ್ಟನರ್‌ಷಿಪ್ ಸಂಬಂಧಪಟ್ಟದ್ದು, ಇದು ಇನ್ನು ಬಹಳ ಭಯಂಕರವಾದುದು. ಇದರಲ್ಲಿ ಹಣದ ವ್ಯವಹಾರ ಇರುವುದರಿಂದ ಬಹಳಷ್ಟು ಜನ ಸಿಕ್ಕಿಕೊಂಡಿದ್ದಾರೆ, ಈ ಕೇಸು ೧೮೮-೩-೮೧ ರಲ್ಲಿ ಸಿವಿಲ್ ಕೋರ್ಟಿನಲ್ಲಿ ವಿಚಾರಣೆಗೆ ಇದೆ. ಇದರ ಬಗ್ಗೆ ಇನ್ನೊಂದು ಬೆಳಕು ಚೆಲ್ಲುವುದಕ್ಕೆ ಇಚ್ಛೆಪಡುತ್ತೇನೆ. ಇದೇ ತರದ ಕೇಸು, ಜಮ್ಮಾ ಮಲ್ಲೈ ಎಂದು ಸರ್ಕಾರಕ್ಕೆ ಕಂದಾಯ ಕಟ್ಟದೆ ೧೯೭೨ ರಲ್ಲಿ ಆಕ್ಷನ್ ಮಾಡಿರುವುದು. ಸರ್ಕಾರದ ಮೂರು ಕೋಟಿ ರೂಪಾಯಿ ಬೆಲೆ ಬಾಳತಕ್ಕ ಆಸ್ತಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ.

SRI K. H. SRINIVAS.—I can very well understand that under 3,12 the scope is limited, But considering the gravity and the thoroughness with which the matter has been investigated by Sri Nanaiah, I would appeal through you to this House, that we shall certainly give some consideration in spite of the rules.

SRI Y. RAMAKRISHNA.—Admittedly, the matter is before the Court, Please consider the placing of the records on the record of this House.

MR. DEPUTY SPEAKER,—It is better not to place these on record.

SRI K. H. SRINIVAS.—The Hon. Minister for Law says that this is pending before the Court. That is a separate thing. It is

not at all subjudice because here the Government's executive responsibility is certainly there. Once the trees are lost, then every thing is lost in this case. That is the crux. So. the question of *Subjudice* does not arise in this matter irrespective of what is pending before the Court. The Government's responsibility is certainly there and we cannot absolve our responsibility when once this House comes to know There is such a big racket of swindling the State's forest wealth and also precious income.

ಶ್ರೀ ಡಿ. ಟಿ. ರಾಮು.—ಕೋರ್ಟು ಮುಂದೆ ಈ ಒಂದು ವೊಕ್ಕದ್ದವೆ ಇರುವಾಗ ಸಬ್‌ಜ್ಯುಡೀಸ್ ಆಗುವುದಿಲ್ಲವೆಂದರೆ ಏನು ಅರ್ಥ ಸ್ವಾಮಿ.

MR. DEPUTY SPEAKER—Without mentioning in detail, you can tal[k]

ಶ್ರೀ ಎಂ. ಪಿ. ನಾನಯ್ಯ.—ಸ್ವಾಮಿ, ನನಗೆ ಮಾತನಾಡಬೇಕೆಂದು ಚಪಲ ಇಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸೂಕ್ಷ್ಮವಾಗಿ ಹೇಳಿ.

ಶ್ರೀ ಎಂ. ಪಿ. ನಾನಯ್ಯ.—ಸೂಕ್ಷ್ಮವಾಗಿ ಹೇಳಬೇಕಾದರೆ, ಷಾಮೀಲಾಗಬೇಕು. ಷಾಮೀಲಾಗದೇ ಆ ರೀತಿ ಹೇಳುವುದಕ್ಕೆ ಆಗುವುದಿಲ್ಲ. If you are interested about Rs. 3/- crores of wealth of our Forest Department, we can sit for two hours more.

SRI K. H. SRINIVAS.—We have spent hours and hours on other matter which are comparatively of minor importance. There is no harm in spending another thirty or forty five miuutes on this subject.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗಾಗಲೇ ಒಂದು ಘಂಟೆ ಕಾಲ ಆದರ ಮೇಲೆ ಮಾತನಾಡಲಾಗಿದೆ.

ಶ್ರೀ ಎಂ. ಪಿ. ನಾನಯ್ಯ.—ಭಾಸ್ಕರ ಶೆಟ್ಟರಿಗೆ ಇದರ ಹಿನ್ನೆಲೆ ಗೊತ್ತಿರಲಿಕ್ಕಿಲ್ಲ. ಸ್ವಾಮಿ, ಬೃಹದಾಕಾರವಾದ ಈ ಘಟನೆ ಏನು ಇದೆ ಇದರ ಬಗ್ಗೆ ಕೋರ್ಟಿನಲ್ಲಿ ಡಿಸಿಷನ್ ಆದರೂ ಕೂಡ ಇದನ್ನು ಮತ್ತೆ ಕೋರ್ಟಿನ ಮುಂದೆ ತರದೇ ಸರ್ಕಾರದ ಆಸ್ತಿಯನ್ನು ಕೊಳ್ಳೆ ಹೊಡೆಯುವುದಕ್ಕೆ ಷಾಮೀಲಾಗಿದ್ದಾರೆ. ಇದೇ ತರದ ಕೇಸು ೧೯೫೮ ರಲ್ಲಿ ನಡೆದಿವೆ. ಮಾನ್ಯ ಮಂತ್ರಿಗಳು ಬರೆದುಕೊಳ್ಳಿ? ಆರ್. ಎ. ೯೫/೬೦. ಈ ದಾಖಲೆಗಳು ಸರ್ಕಾರದಲ್ಲಿಯೂ ಇಲ್ಲ? ನಿಮ್ಮ ಕಾನೂನು ಇಲಾಖೆಯಲ್ಲಿಯೂ ಇಲ್ಲ.

ಶ್ರೀ ಜಿ. ಮಾದೇಗೌಡ —ಮಾನ್ಯ ಸದಸ್ಯರಾದ ನಾನಯ್ಯನವರು ೧೫೪೪/೫ ರ ಜಮೀನಿನ ವಿಷಯದಲ್ಲಿ ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೇ ಬರದೇ ಇರತಕ್ಕ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಎಷ್ಟು ಬೇಕಾದರೂ ಮಾತನಾಡಿ.....…...

SRI M. C. NANAIAH.—A similar case came up regarding public auction of Jamma malai for non-payment of arrears. The purchaser agitated in a court of law. The matter came up before the District Judge in the year 1958. The District Judge dismissed it. Therafter, the State Government preferred an appeal in High Court in R. A. No, 95/60. In the Judgment, the High Court said...

SRI Y. RAMAKRISHNA.—Sir, Rule is quite clear. A Member, while speaking shall not refer to a matter on which a judicial decision is pending. The Hon. Member has taken long time. I am also thankful to him for having brought these things to notice But is this the forum ?

SRI S. R. BOMMAI.—So, for as this point is concerned, thare are a number of rulings. In spite of a matter pending before the court of law, the legislative powers are there. On certain aspects, we can throw light,

5-00 P.M.

SRI Y. RAMAKRISHNA.—He has admitted that the matter pending before the court. The rule is very clear about that.

SRI M. C. NANAIAH.—I did not say.

SRI S.R. BOMMAI.—We can't go to the merits of the case.

SRI K. H. SRINIVASA.—Please enlighten us what exactly the rule that comes in the way of telling this to this House.

MR. DEPUTY SPEAKER.—When the matter is.....

SRI A. LAKSHMI SAGAR.—I am not going to the merits of the case. I understand your point. I will try to satisfy you. We are not doing anything which comes in the way of High Court disposing of the regular second appeal. Let me make myself clear. What exactly the point is that very vehemently, very purposefully the matter being brought about by Mr. Nanaiah is that on account of lapses committed by persons series of acts have been committed, as a result of which the Government property which belongs to the entire State is being lost and it is being grabbed by certain interested. persons There comes the duty of the Government and Ministers in particular. That is the point he was trying to make. We cannot come in the way of the High Court disposing of the matter. Incidentally, he has said that an appeal is pending. That is the point. The Government should make up from deep slumber. My learned friend Sri Ramakrishna should realise that we know these rules. I have also said on several occasions that several such matters have already come up before the House and the House has had occasions to go into these matters notwithstanding the matter pending before Courts. For example, we have discussed regarding Silk Exchange when writ petitions were pending before the High Court. It was discussed on the floor of this House and I can give a number of cases.

SRI Y. RAMAKRISHNA.—Mr. Deputy Speaker. It is for you to give ruling.

ಶ್ರೀ ಜಿ. ಮಾದೇಗೌಡ.—ಮಾನ್ಯ ನಾನಯ್ಯನವರು ಮಾತನಾಡಲಿಕ್ಕೆ ನನ್ನದೇನೂ ಅಡ್ಡಿ ಇಲ್ಲ. ವಿಷಯ ೧೫ನೇ ಸರ್ವೆ ನಂಬರನಲ್ಲಿ ಆಕ್ರಮ ನಡೆದಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಎಷ್ಟು ಬೇಕಾದರೂ ಹೇಳಲಿ, ಸರ್ಕಾರಕ್ಕೆ ಗೊತ್ತಿಲ್ಲದ ಎಷ್ಟೋ ವಿಷಯಗಳನ್ನು ಹೇಳಿದ್ದಾರೆ. ಮೊನ್ನೆ ಕೂಡ ಇದರ ಬಗ್ಗೆ ಮಾತನಾಡಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಅದನ್ನು ಬಿಟ್ಟು ಬೇರೆ ವಿಷಯಗಳನ್ನು ಮಾತನಾಡುವುದಾದರೇ.....

ಶ್ರೀ ಕೆ. ಎಚ್. ಶ್ರೀನಿವಾಸ್.—ನಿಮಗೆ ಮಂತ್ರಿ ಡಿಪಾರ್ಟ್‌ಮೆಂಟ್‌ನವರಿಗೆ ಗೊತ್ತಿಲ್ಲದೆ ಇರತಕ್ಕ ಎಷ್ಟೋ ವಿಷಯಗಳನ್ನು ಹೈಕೋರ್ಟ್ ಡಿಸಿಸನ್ ಆವರು ಹೇಳಿದರು, ಅಂದರೆ There is old judgment which has conclusively established the position in law· ಇದರಿಂದ ನಿಮಗೆ ಡೀಲ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಜಿ. ಮಾದೇಗೌಡ.—ಕೆಲವು ವಿಷಯಗಳು ನಮಗೆ ಬರುವುದಿಲ್ಲ. ಕೆಲವು ವಿಷಯಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇರುವ ವಿಷಯವನ್ನು ಹೇಳುತ್ತಿದ್ದೇವೆ. ಅರಣ್ಯವನ್ನು ರಕ್ಷಣೆ ಮಾಡಬೇಕು ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇವೆ. ಈಗಾಗಲೇ ಕೆಲವು ವಿಷಯಗಳು ಗೊತ್ತಿದ್ದರೆ ತುಂಬಾ ಸಂತೋಷ.

ಶ್ರೀ ಎಂ. ಸಿ. ನಾನಯ್ಯ.—ನಾನು ಏತಕ್ಕೆ ಹೇಳಿದೆ ಎಂದರೆ, ಆ ಒಂದು ಕೇಸಿಗೆ ಸಂಬಂಧಪಟ ಒಂದು ದಾವೆ ಹೈಕೋರ್ಟ್‌ಗೆ ಹೋಗಿ ಅಲ್ಲಿಂದ ಸುಪ್ರೀಮ್ ಕೋರ್ಟಿಗೆ ಹೋಗಿ ಡಿಸೀಸನ್ ಆಗಿದೆ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅದರ ನಂಬರು ಆರ್‌ಎ ೯೫೬೦, ಜಡ್ಜ್‌ಮೆಂಟ್ ಕಾಪಿಗೆ ಪ್ರಯತ್ನ ಮಾಡುತ್ತಿದ್ದೇನೆ ಕಾಪಿ ಸಿಕ್ಕಿದರೆ ಕೊಡುತ್ತೇನೆ. ತಾವು ಡಿಪಾರ್ಟ್‌ಮೆಂಟ್‌ನವರ ಮುಖಾಂತರ ತೆಗೆದುಕೊಳ್ಳಿ. ಇದು ೩ ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟ ವಿಷಯ. ೩೦ ರೂಪಾಯಿ ೩ ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟಿದ್ದರೆ ನಾನು ಕೇಳುತ್ತಿರಲಿಲ್ಲ. ಈ ವಿಷಯು ಕೊಡಗು ಜಿಲ್ಲೆಯ ವಾತಾವರಣವನ್ನೇ ಏರುಪೇರು ಮಾಡುವ ಪರಿಸ್ಥಿತಿ ಬಂದಿದೆ. ಕೊಡಗು ಜಿಲ್ಲೆ ಕೋಲಾರ ಜಿಲ್ಲೆಯ ತರಹ ಆಗಲಿಕ್ಕೆ ಇಚ್ಛೆಪಡುವುದಿಲ್ಲ. ಕಾವೇರಿ ನೀರು ಇಲ್ಲದಿದ್ದರೆ ಮಂಡ್ಯ ಮೈಸೂರು ಎಲ್ಲಿ ಇರುತ್ತದೆ. ರಾಜ್ಯವನ್ನು ಉಳಿಸಬೇಕಾದರೆ ಕಾವೇರಿಯನ್ನು ಉಳಿಸಿ, ಕಾವೇರಿ ಉಳಿಯಬೇಕಾದರೆ ಪಶ್ಚಿಮಘಟ್ಟದ ಅರಣ್ಯವನ್ನು ಉಳಿಸಿ. ಇದರ ಬಗ್ಗೆ ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್ ಆಗಿದೆ. There is a decision already. It is a conclusive proof. No. RA/95/60. High Court, they have given final decision. " I have no propriety right over this. This is the final d-cison." ನಾನು ಇಷ್ಟು ಮಾಹಿತಿಯನ್ನು ಕೊಟ್ಟಿದ್ದೇನೆ. ಜಮ್ಮಾ ಮಲೈ ಬಗ್ಗೆ ಒಂದು ವಿಷಯ ಗಮನಕ್ಕೆ ಬಂದಿದೆ ಪುನಃ ಅಡೆತಡೆ ಮಾಡಿ ಸೆಕ್ಯೂರಿಟಿ ತೆಗೆದುಕೊಂಡು ಮರ ಕಡಿಯಲಿಕ್ಕೆ ಅನುಮತಿಯನ್ನು ಕೊಡಬಹುದು ಎನ್ನುವ ವದಂತಿ ಬಂದಿದೆ, ಇದು ಸರಿಯಲ್ಲ. ಬಹುಶಃ ಆ ರೀತಿ ಇಲ್ಲದಿದ್ದರೆ ನಾನು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನಾನು ನಾಲ್ಕು ಆಶ್ವಾಸನೆಗಳನ್ನು ಕೇಳುತ್ತಿದ್ದೇನೆ, ಒಂದನೆಯದು ಹೈಕೋರ್ಟ್‌ನಲ್ಲಿ ವಾದ ಮಾಡುತ್ತಿರತಕ್ಕಂತಹ ವಕೀಲರನ್ನು ತೆಗೆದು ಹಾಕಿ, ಮಾನ್ಯ ಲಕ್ಷ್ಮೀಸಾಗರ್ ರವರನ್ನು ನಾನು ಕೇಳಿಕೊಂಡಿದ್ದೇನೆ ಅವರು ಮುಂಚೆತ್ನಾಗಿವಾದ ಮಾಡುತ್ತೇನೆಂದು ಒಪ್ಪಿಕೊಂಡಿದ್ದಾರೆ ಇಲ್ಲದಿದರೆ ಬೇರೆಯವರನ್ನು ನೇಮಕಮಾಡಿ. ಸರ್ಕಾರದ ೩ ಕೋಟಿ ರೂಪಾಯಿಗಳ ಆಸ್ತಿಯನ್ನು ಉಳಿಸತಕ್ಕಂತಹ ವಿಚಾರ, ಅದಕ್ಕೆ ಬೇಕಾದಂತಹ ಡಾಕ್ಯುಮೆಂಟ್ಸ್‌ಗಳನ್ನು ಒದಗಿಸಿಕೊಡುತ್ತೇನೆ. (೨) ಕೆಳಗಿನ ಕೋರ್ಟಿನ ಡಿಕ್ರಿ ಏನು ಇದೆ ಅದರ ಬಗ್ಗೆ ಅರ್ಜಿ ಸಲ್ಲಿಸಿ. ಮೂರನೆಯದಾಗಿ ದಯವಿಟ್ಟು ಅರಣ್ಯ ಪಲಯಾಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳವರಿಗೆ ಕೂಡಲೇ ಆದೇಶ ಕೊಟ್ಟು ಮರಗಳನ್ನು ಕಡಿಯದಂತೆ ತಿಳಿಸಿ. ನಾಲ್ಕನೆಯದು ಟ್ರೀ ಪ್ರೊಟೆಕ್ಷನ್ ಆಕ್ಟ್ ಏತಕ್ಕೆ ತಂದಿದ್ದೀರಿ ? ಅದು ನಿಮಗೋಸ್ಕರವೇ ? ದಯವಿಟ್ಟು ಅರಣ್ಯವನ್ನು ಉಳಿಸಿ. ಅರಣ್ಯ ಸಂರಕ್ಷಣೆ ಮಾಡುವುದಕ್ಕೋಸ್ಕರ ತಂದಿದ್ದು, ಇವತ್ತು ಒಬ್ಬ ಖಾಸಗೀ ವ್ಯಕ್ತಿಗೆ ಸೇರಿಸತಕ್ಕಂತಹ ಜಮೀನು ಮಾಲೀಕತನ ಕೊಟ್ಟು ಪಶ್ಚಿಮ ಘಟ್ಟದ ಮರಗಳನ್ನು ಕಡಿದು ಅಲ್ಲಿಯ ವಾತಾವರಣವೇ ಏರುಪೇರು ಆಗುವ ಸಂದರ್ಭ ಬಂದಾಗ ಟ್ರೀ ಪ್ರೊಟೆಕ್ಷನ್ ಆಕ್ಟ್‌ನ್ನು ರೆಪ್ಯೂಸ್ ಮಾಡತಕ್ಕಂತಹದ್ದು ಇದೆ. ಟ್ರೀ ಪ್ರೊಟೆಕ್ಷನ್‌ಆಕ್ಟ್‌ನ್ನು ನೀರಿಗೆ ಬೀಸಾಡಿ ಮರಗಳನ್ನು ಕಡಿಯತಕ್ಕಂತಹ ಪ್ರಯತ್ನ ಒಂದು ಕಾರ್ಯಕ್ರಮ ನಡೆದಿದೆ. ದಯವಿಟ್ಟು ಒಂದು ಕ್ರಮ ತೆಗೆದುಕೊಳ್ಳಿ. ಸರ್ಕಾರದ ಆಸ್ತಿಯನ್ನು ಉಳಿಸಿ ಪಶ್ಚಿಮಘಟ್ಟದ ಅರಣ್ಯವನ್ನು ಉಳಿಸಿ ಕಾವೇರಿ ನದಿಯನ್ನು ಉಳಿಸೋಣ.

ಶ್ರೀ ಜಿ. ಮಾದೇಗೌಡ.—ನಾವು ಉಳಿಯಬೇಕಾಗಿದೆ.

ಶ್ರೀ ಎಂ. ಸಿ. ನಾನಯ್ಯ.—ಅರಣ್ಯವನ್ನು ಉಳಿಸದಿದ್ದರೆ, ನೀವು ಕೋಲಾರಕ್ಕೆ ಹೋಗಬೇಕಾಗುತ್ತದೆ. ಕಾವೇರಿ ನದಿಯಿಂದ ಮೈಸೂರು, ಮಂಡ್ಯಾ ಮತ್ತು ಬೆಂಗಳೂರು ಜಿಲ್ಲೆಗಳಿಗೆ ನೀರಿನ ಅನುಕೂಲ ಇದೆ. ಆದ್ದರಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಅರಣ್ಯವಲಯಾಧಿಕಾರಿಗಳ ವರಿಗೆ ತಕ್ಷಣ ಆದೇಶ ಕೊಟ್ಟು ಈ ಕೇಸು ಮುಗಿಯುವ ತನಕ ಏನು ಮಾಡಬೇಡಿ ಎಂದು, ಮರ ಕಡಿಯುವಿಕ್ಕೆ ಅನುಮತಿಯನ್ನು ಕೊಡಬೇಡಿ ಎಂದು ಹೇಳಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಸದಸ್ಯರು ಈ ವಿಷಯದ ಬಗ್ಗೆ ಒಂದು ಗಂಟೆ ವಿವರವಾಗಿ ಹೇಳಿದ್ದಾರೆ, ದಯಮಾಡಿ ಬೇಗ ಮುಗಿಸಬೇಕಾಗಿ ಪ್ರಾರ್ಥನೆ. ಏತಕ್ಕೆಂದರೆ ಸಮಯ ಕಡಿಮೆ ಇದೆ.

SRI K. H. SRINIVASA.—Men may come and men may go, but Bhaskar Shetty will femain permanently as Chief Whip. ಅವರು ಪರ್ಮನೆಂಟ್ ವಿಪ್ ಆಗಿದ್ದಾರೆ, ಅವರಿಗೇನು ತೊಂದರೆ.

ಶ್ರೀ ಎಂ. ಸಿ. ನಾನಯ್ಯ.—ಭಾಸ್ಕರಶೆಟ್ಟರಿಗೂ ನನಗೂ ಸಂಬಂಧವಿದೆ, ಹೇಗೆಂದರೆ ಅವರು ಚೀಫ್ ವಿಪ್ ಆಗಿದ್ದಾಗ ನಾನು ಜಾಯಿಂಟ್ ವಿಫ್ ಆಗಿದ್ದೆ. ಅವರು ಆಲ್ಲಿ ಚೀಫ್ ವಿಫ್ ಆಗಿದ್ದಾರೆ, ನಾನಂ ಇಲ್ಲಿ ಚೀಫ್ ವಿಫ್ ಆಗಿದ್ದೇನೆ. ಅರಣ್ಯ ಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಇದರ ಬಗ್ಗೆ ಸ್ವಲ್ಪ ನಿಗಾವಹಿಸಿ ಮರ ಕಡಿಯಲು ತಡೆ ಆಜ್ಞೆಯನ್ನು ಮಾಡಿ ಮರ ಕಡಿಯಲು ಅನುಮತಿ ಕೊಡಬೇಡಿ. ಸರ್ಕಾರದ ಆಸ್ತಿ ಸಂರಕ್ಷಣೆ ಮಾಡಿ, ಹೈಕೋರ್ಟ್‌ನಲ್ಲಿ ವಾದ ಮಾಡತಕ್ಕ ಸರ್ಕಾರಿ ವಕೀಲರನ್ನು ತೆಗೆದುಹಾಕಿ ಲಕ್ಷ್ಮೀಸಾಗರ್‌ರವರನ್ನು ನೇಮಕ ಮಾಡಿದ್ದರೂ ಬೇರೆ ವಕೀಲರಿಗೆ ದುಡ್ಡು ಕೊಟ್ಟಾದರೂ ಸರ್ಕಾರದ ೩ ಕೋಟಿ ರೂ. ಗಳ ಆಸ್ತಿಯನ್ನು ಉಳಿಸುವುದಕ್ಕೆ ವ್ಯವಸ್ಥೆ ಮಾಡಿ. ಸಂಬಂಧಪಟ್ಟ ಪುರಾವೆಗಳನ್ನು ಮತ್ತು ಮಾಹಿತಿಗಳನ್ನು ಕೊಡುತ್ತೇನೆ. ನಿಮಗೋಸ್ಕರ ಮಾಹಿತಿಗಳನ್ನು ತಂದಿದ್ದೇನೆ. ಇದನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಈ ಸದನದಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ ಮಾದೇಗೌಡ.—ಪಶ್ಚಿಮ ಘಟ್ಟದ ಅರಣ್ಯವನ್ನು ಉಳಿಸಬೇಕೆಂಬ ಬಗ್ಗೆ ನಾನು ಕೂಡ ಕಳಕಳಿ ಇಟ್ಟುಕೊಂಡಿದ್ದೇನೆ. ಮಾನ್ಯ ಸದಸ್ಯರಾದ ನಾಣಯ್ಯನವರು ಸರ್ವೆ ನಂಬರ್ ೧೫೪-೫ರಲ್ಲಿ ಸುಮಾರು ೪೬೫ ಎಕರೆ ಇದೆ ಎಂದು ಹೇಳಿದರು.

SRI M.C. NANAIAH.—There are other survey numbers also belonging.....

SRI G. MADE GOWDA.—But, that survey No. is not mentioned.

ಶ್ರೀ ಎಂ.ಸಿ. ನಾನಯ್ಯ.—ಜಮ್ಮಾಮಲೇಸ್ ಲ್ಯಾಂಡ್ ಮೈನ್ ಸರ್ವೆ ನಂಬರ್. ಬಾಕಿ ನಾಲ್ಕು ಸಬ್ ಸರ್ವೆ ನಂಬರ್ ಇದೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ೧೫೪ನೇ ಸರ್ವೆ ನಂಬರಿನ ವಿಚಾರವನ್ನು ಏನು ಕೇಳಿದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ಇನ್‌ಫರ್‌ಮೇಷನ್ ಇದೆ, ಅದನ್ನು ಮಾತ್ರ ಹೇಳುತ್ತೇನೆ. ನಮ್ಮಲ್ಲಿರತಕ್ಕ ರೆಕಾರ್ಡ್ಸ್ ಪ್ರಕಾರ ಜಮ್ಮಾಮಲೇಸ್ ಏರಿಯಾ ಸುಮಾರು ೭,೮೪೦ ಎಕರೆ ಇದೆ. ಈಗ ಮಾನ್ಯ ಸದಸ್ಯರು ಸರ್ವೆ ನಂಬರ್ ೧೫೪-೫ ಎಂದು ಏನು ಹೇಳುತ್ತಿದ್ದಾರೆ ಅದು ಜಮ್ಮಾಮಲೇಸ್ ಲ್ಯಾಂಡ್‌ಗೆ ಸಂಬಂಧಪಟ್ಟಿದಲ್ಲ ಎನ್ನತಕ್ಕದು ನಮ್ಮಲ್ಲಿರತಕ್ಕುದು.

ಶ್ರೀ ಎಂ.ಸಿ. ನಾನಯ್ಯ.—ಸ್ವಾಮಿ, ನಾನು ತಮಗೆ ಏನು ಹೇಳಿದೆ ಎಂದರೆ, ಜಮ್ಮಾಮಲೇಸ್ ಬಗ್ಗೆ ಆರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಕೊಟ್ಟಿಲ್ಲ. ಅಲ್ಲಿ ಆಕ್ಷನ್ ಪರ್ಚೆಸ್ ಮಾಡಿ ಅಲ್ಲಿಂದ ಮರಗಳನ್ನು ಕಡಿಯಲಿಕ್ಕೆ ಕೇಳುತ್ತಿದ್ದಾರೆ.

ಶ್ರೀ ಜಿ. ಮಾದೇಗೌಡ.—ತಮ್ಮ ಕಳಕಳಿ ನನಗೆ ಅರ್ಥವಾಗಿದೆ. ಈಗ ಸರ್ಕಾರದ ರೆಕಾರ್ಡ್‌ನಲ್ಲಿ ಏನಿದೆ, ನಮ್ಮ ಅಧಿಕಾರಿಗಳು ಏನು ಇನ್‌ಫರ್‌ಮೇಷನ್ ಕೊಟ್ಟಿದ್ದಾರೆ ಅದನ್ನು ನಾನು ಹೇಳಬೇಕಾಗುತ್ತದೆ. ತಾವು ಈ ಜಾಗದಲ್ಲಿದ್ದರೆ ಅದನ್ನೇ ಹೇಳುತ್ತಿದ್ದೀರಿ. ಈಗ ತಾವು ಏನು ಹೇಳುತ್ತೀರಾ ಅದನ್ನು ಬೇಕಾದರೆ ತಿಳಿದುಕೊಳ್ಳೋಣ. ನಾನು ಇಲ್ಲಿ ನಿಂತುಕೊಂಡು ಉತ್ತರ ಕೊಡುವಾಗ ನಮ್ಮ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಏನು ಮಾಹಿತಿ ಕೊಟ್ಟಿರುತ್ತಾರೆ ಅದನ್ನು ಹೇಳಬೇಕಾಗುತ್ತದೆ. ಈಗ ಮಾನ್ಯ

ಸದಸ್ಯರು ಏನು ಹೇಳುತ್ತಿದ್ದೀರಿ ಆದರ ಬಗ್ಗೆ ಪುನರ್ ಪರಿಶೀಲನೆ ಮಾಡೋಣ. ಅಧಿಕಾರಿಗಳು ಏನಾದರೂ ತಪ್ಪು ಮಾಡಿದರೆ ಶಿಕ್ಷೆ ಮಾಡೋಣ. ಕೋರ್ಟಿನಲ್ಲಿ ಮಾಡಿರುವುದು ನಮ್ಮ ವಿರುದ್ಧವಾಗಿದ್ದರೆ ಅವರಿಗೆ ನಾವು ಏನೂ ಮಾಡಲಿಕ್ಕೆ ಬರುವುದಿಲ್ಲ. ನಮ್ಮ ಅಧಿಕಾರಿಗಳು ತಪ್ಪು ಮಾಡಿದ್ದರೆ ಶಿಕ್ಷೆ ಮಾಡಲಿಕ್ಕೆ ನಮಗೆ ಅಧಿಕಾರ ಇದೆ. ನಮ್ಮ ಮುಂದಿರತಕ್ಕ ರೆಕಾರ್ಡ್ ಪ್ರಕಾರ ತಾವು ಹೇಳಿರತಕ್ಕ ೧೫೪–೫ರ ಸರ್ವೆ ನಂ. ಜಮ್ಮಾಮಲೇಸ್‌ಗೆ ಸಂಬಂಧಪಟ್ಟಿಲ್ಲ. ಅದು ನಿಮಗೂ ಗೊತ್ತಿರಬೇಕು.ಕೂರ್ಗ್ ಪದ್ಧತಿ ನಮಗೆ ಗೊತ್ತಿಲ್ಲ. ಏಕೆಂದರೆ ಅಲ್ಲಿ ಎರಡು ಮೂರು ತರಹ ಲ್ಯಾಂಡ್ ಇದೆ. ಒಂದು ರೆಡೀಮ್ಡ್ ಲ್ಯಾಂಡ್, ಎರಡು ಅನ್‌ರೆಡೀಮ್ಡ್ ಲ್ಯಾಂಡ್ ಮೂರು ಜಮ್ಮಾಮಲೇಸ್ ಎಂದು ಮೂರು ತರಹ ಇದೆ. ೧೫೪–೫ ಸರ್ವೆ ನಂಬರ್ ರೆಡೀಮ್ಡ್ ಲ್ಯಾಂಡ್ ಆಗಿದೆ ಎಂದು ಸಿವಿಲ್ ಜಡ್ಜ್ ಕೋರ್ಟಿನಲ್ಲಿಡಿಸ್ಟ್ರಿಕ್ ಜಡ್ಜ್‌ಕೋರ್ಟ್‌ನಲ್ಲಿ ತೀರ್ಪಾಗಿದೆ.ರೆಡೀಮ್ಡ್ ಲ್ಯಾಂಡ್ ಇಮಾನ್ಯುಯಲ್ ರಾಮಪುರಂ ಅವರಿಗೆ ಸಂಬಂಧಪಟ್ಟಿದ್ದು ಎಂದು ಕೋರ್ಟಿನಲ್ಲಿ ತೀರ್ಪಾಗಿದೆ, ಅದು ರೆಡೀಮ್ಡ್ ಲ್ಯಾಂಡ್ ಎಂದು ಜಡ್‌ಮೆಂಟಿನಲ್ಲಿ ಬರೆದಿದ್ದಾರೆ. ಆದ್ದರಿಂದ ಅದರ ಮೇಲೆ ಅವರಿಗೆ ಹಕ್ಕು ಇದೆ. ಸಿವಿಲ್ ಜಡ್ಜ್‌ಕೋರ್ಟಿನಲ್ಲಿ ಮರಗಳನ್ನು ಕಡಿದು ಕೊಂಡು ಹೋಗಬಹುದೆಂದು ತೀರ್ಪು ಕೊಟ್ಟಿದ್ದಾರೆ.ಆದರಲ್ಲಿ ಇನ್ನೊಂದು ವಿಶೇಷ ಏನು ಎಂದರೆ ಡೆಪ್ಯುಟಿ ಕಮಿಷನರ್ ಅವರನ್ನು ಪಾರ್ಟಿ ಮಾಡಿಕೊಂಡಿದ್ದಾರೆ ಹೊರತು, ನಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರನ್ನು ಪಾರ್ಟಿ ಮಾಡಿಕೊಂಡಿಲ್ಲ. ಇದರ ಬಗ್ಗೆ ಡೆಪ್ಯುಟಿ ಕಮಿಷನರ್ ಮತ್ತು ಇಮಾನ್ಯುಯಲ್ ರಾಮಪುರಂ ಅವರು ವ್ಯಾಜ್ಯ ಮಾಡುತ್ತಿದ್ದಾರೆ. ಇದು ನಮ್ಮ ಗಮನಕ್ಕೆ ಬಂದಿಲ್ಲ. ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಇದು ರೀಡೀಮ್ಡ್ ಲ್ಯಾಂಡ್ ಅವರಿಗೆ ಆದರ ಮೇಲೆ ಹಕ್ಕು ಇದೆ, ಮರಗಳನ್ನು ಕಡಿದುಕೊಳ್ಳಬಹುದು ಎಂದು ಹೇಳಿದ್ದಾರೆ. ತಾವು ಹೇಳಿದ ಪ್ರಕಾರ ನಮ್ಮ ಅಧಿಕಾರಿಗಳು ಸರಿಯಾದ ದಾಖಲಾತಿ ಕೊಡದೇ ಇರುವುದರಿಂದ, ಅಥವಾ ನಮ್ಮ ಲಾಯರ್ ಸರಿಯಾದ ವಾದ ಮಾಡದೇ ಇರುವುದರಿಂದ ನಮಗೆ ವಿರೋಧವಾಗಿದೆ ಎಂದು ಊಹೆ ಮಾಡೋಣ. ಇವೊತ್ತು ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಅವರ ಪರ ಆಗಿರುವುದರಿಂದ ನಮ್ಮ ಕೂರ್ಗ್ ಡೆಪ್ಯುಟಿ ಕಮಿಷನರ್ ಹೈಕೋರ್ಟಿಗೆ ಅಪೀಲು ಬಂದಿದ್ದಾರೆ, ಈಗ ಒಂದು ಇಂಟ್ರಿಮ್ ಆರ್ಡರ್ ಮಾಡಿ ಮರಗಳನ್ನು ಕಡಿದುಕೊಳ್ಳಬೇಕಾದರೆ ಸೆಕ್ಯೂರಿಟಿ ಕೊಟ್ಟು ಕಡಿದುಕೊಳ್ಳಬೇಕೆಂದು ಆರ್ಡರ್ ಮಾಡಿದ್ದಾರೆ. ಈ ಸಂಬಂಧದಲ್ಲಿ ನಮ್ಮ ಫಾರೆಸ್ಟ್ ಆಫೀಸರ್ ಆ ಜಮೀನಿನಲ್ಲಿ ೬೬,೬೨, ೧೫೧೧ ರೂಪಾಯಿ ಬೆಲೆ ಬಾಳತಕ್ಕ ಮರಗಳಿವೆ ಎಂದು ವ್ಯಾಲ್ಯು ಮಾಡಿ ಸಿವಿಲ್ ಜಡ್ಜ್ ಕೋರ್ಟಿಗೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿಯವರೆಗೆ ಗೊತ್ತಿದೆ. ಈಗ ತಾವು ಪ್ರೊಟೆಕ್ಷನ್ ಆಫ್ ಟ್ರೀ ಆ್ಯಕ್ಟ್ ಪ್ರಕಾರ ಎಲ್ಲರೂ ಪರ್‌ಮಿಷನ್ ತೆಗೆದುಕೊಂಡು ಮರಗಳನ್ನು ಕಡಿಯಬೇಕೆಂದು ಇದೆ ಎಂದು ಹೇಳುತ್ತಿದ್ದೀರಿ. ಅಲ್ಲಿ ಯಾವ ಮರಗಳನ್ನು ಕಡಿದಿಲ್ಲ. ಮರಗಳನ್ನು ಕಡಿಯಲಿಕ್ಕೆ ಅವಕಾಶ ಕೊಟ್ಟಿಲ್ಲ. ನಾಳೆ ಅವರಿಗೆ ಹೈಕೋರ್ಟಿನಿಂದ ಡೈರೆಕ್ಷನ್ ಕೊಟ್ಟರೆ I can not go and appeal ಈಗ ನೀವು ಇಮೊಡಿಯಟ್ ಆಗಿ ಸ್ಟೇ ವೆಕೇಟ್ ಮಾಡಲಿಕ್ಕೆ ಪ್ರಯತ್ನ ಮಾಡಬೇಕು, ಸರಿಯಾದ ಲಾಯರ್ ಇಟ್ಟುಕೊಳ್ಳಬೇಕು. ನನ್ನಲ್ಲಿ ಕೆಲವು ದಾಖಲೆಗಳಿವೆ ಅವುಗಳನ್ನು ಕೊಡುತ್ತೇನೆ, ನಾನು ಆ ಕೋರ್ಟಿನಲ್ಲಿಯೇ ಹೋಗಿ ಕುಳಿತುಕೊಳ್ಳುತ್ತೇನೆ ಎಂದು ಹೇಳಿದ್ದೀರಿ. ಮಾನ್ಯ ಲಕ್ಷ್ಮೀಸಾಗರ್ ಅವರು ಪ್ರಕಸಟ್ಟಿ ವಾದ ಮಾಡುವುದು ಬೇಡ. ಅವರಿಗೆ ಫೀಜು ಕೊಡೋಣ, ಕೇಸ್ ಗೆಲ್ಲುವುದಕ್ಕೆ ಪ್ರಯತ್ನ ಮಾಡೋಣ. ತಾವು ಅಲ್ಲಿ ಮೂರು ಕೋಟಿ ರೂಪಾಯಿ ಮರ ಇದೆ ಎಂದು ಹೇಳಿದ್ದೀರಿ. ನಮ್ಮ ಡಿಪಾರ್ಟ್‌ಮೆಂಟಿನವರ ಇನ್‌ಫರ್‌ಮೇಷನ್ ಪ್ರಕಾರ ೬೬,೬೨,೧೫೧೧ ರೂಪಾಯಿ ಬೆಲೆ ಬಾಳತಕ್ಕ ಮರ ಇದೆ. ೬೦ ಲಕ್ಷ ಎಂದರೆ ಕಡಿಮೆ ಹಣ ಏನೂ ಅಲ್ಲ. ಅದನ್ನು ಉಳಿಸತಕ್ಕ ಜವಾಬ್ದಾರಿ ನಮ್ಮದಾಗಿದೆ, ಮಾನ್ಯ ಸದಸ್ಯರು ಇಷ್ಟು ವಿಚಾರಗಳನ್ನು ತಿಳಿಸಿ ಸರ್ಕಾರಕ್ಕೆ ಸಹಾಯ ಮಾಡಿದ್ದೀರಿ, ಆದುದರಿಂದ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. I have given direction to the Deputy Commissioner to get the stay order in favour of the Government, not to enter upon that land. ಈ ಬಗ್ಗೆ ಹೈಕೋರ್ಟಿನಲ್ಲಿ ಮೂವ್ ಮಾಡಿ ಸ್ಟೇ ಆರ್ಡರ್ ತೆಗೆದುಕೊಳ್ಳಿ ಎಂದು ಆದೇಶವನ್ನು ಡೆಪ್ಯುಟಿ ಕಮಿಷನರ್‌ಗೆ ಕೊಡಬೇಕಾಗುತ್ತದೆ. ರೆವಿನ್ಯೂ ಡಿಪಾರ್ಟ್‌ಮೆಂಟಿನವರನ್ನು ಪಾರ್ಟಿ ಮಾಡಿದ್ದಾರೆಯೇ ಹೊರತು ನಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರನ್ನು ಪಾರ್ಟಿ ಮಾಡಿಲ್ಲ. ಇದರ ಬಗ್ಗೆ ತಮ್ಮಲ್ಲಿ ಏನಾದರೂ ದಾಖಲಾತಿ ಇದ್ದರೆ, ಅದನ್ನು ಕೊಟ್ಟರೆ ನಾವು ಡೆಪ್ಯುಟಿ ಕಮೀಷನರ್‌ಗೆ ಇನ್‌ಸ್ಟ್ರಕ್ಷನ್ ಕೊಡುತ್ತೇವೆ. Not to enter upon that land ಎಂದು ಸ್ಟೇ ಆರ್ಡರ್ ತೆಗೆದುಕೊಳ್ಳುವುದಕ್ಕೆ ಎಲ್ಲ ಪ್ರಯತ್ನ ಮಾಡುತ್ತೇವೆ. ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

SRI K.H. SRINIVAS.—I have a small suggestion to make. Now in this case the Forest Department has never been made a party to all these proceedings. When you have not been made a party, normally, in the course of private individuals any judgment is not binding on that. Therefore the Government can also try at least to get a temporary advantage of time and by the time you think of other procedures, that also you can immediately confirm with the Law Department or some legal experts.

ಶ್ರೀ ಎಂ.ಸಿ. ನಾನಯ್ಯ.—ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಅವರ ಪರವಾಗಿ ಆಗಿದೆ ಎಂದು ಒರಿಜಿನಲ್ ಸೂಟ್‌ನಲ್ಲಿ ಇರತಕ್ಕುದ್ದು. ಳ-ಓರಲ್ಲಿ ಮತ್ತೆ ಅವರ ಸೂಟ್ ಯಾವುದು ಇತ್ತು ಅದನ್ನು ಡಿಸ್‌ಮಿಸ್ ಮಾಡಿದರು.

SRI G. MADE GOWDA.—We have civil Court judgment. They have said it is a redeemed land.

SRI M.C. NANAIAH.—No They have not said.

SRI K.H. SRINIVAS.—If it is redeemed land, that is much contrary to the established procedures of law and also under the Supreme Court judgment.

ಶ್ರೀ ಎಂ.ಸಿ. ನಾನಯ್ಯ.—ಇದೆಲ್ಲಾ ಆಗುವಪರೆಗೆ ಅರಣ್ಯ ಉಳಿಯುತಕ್ಕ ವ್ಯವಸ್ಥೆ ಮಾಡಿ. I will be the happiest man. I can take the Hon'ble Minister's name to the entire district of Coorg.

ಶ್ರೀ ಮಾದೇಗೌಡ.—ನಾವೂ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇವೆ. ನಮ್ಮ ಅಧಿಕಾರಿಗಳಿಗೂ ಹೇಳಬೇಕಾಗಿದೆ. ಅಲ್ಲದೆ ಈ ಕೋರ್ಟ್ ಸ್ಟೇ ವೆಕೇಟ್ ಮಾಡಿಸಬೇಕು. Interim order will be obtained not to enter upon that land.

SRI M.C. NANAIAH.—Change the advocate and entrust the responsibility to a senior advocate of Bangalore.

SRI G. MADE GOWDA.—From our side we will ask the Deputy Commissioner to engage a good lawyer and take assistance from you also.

SRI M.C. NANAIAH.—I am prepared to give assistance. Entrust the whole case to a Senior advocate of Bangalore to protect the interest of the State.

SRI Y. RAMAKRISHNA.—It amounts to private practice. I do not think he will do it free.

SRI K.H. SRINIVAS.—The Hon'ble Minister can immediately invoke provisions of Tree protection Act in all these transactions. Right or wrong, after all here is a Government which needs to protect the interest of the State.

SRI M.C. NANAIAH.—Under the Tree Protection Act, the Divisional Forest Officer can refuse permission to fell trees.

ಶ್ರೀ ಜಿ. ಮಾದೇಗೌಡ.—ನಾನೂ ಹೇಳಿದ್ದೇನೆ. ನಮ್ಮ ಲೀಗಲ್ ಡಿಪಾರ್ಟ್‌ಮೆಂಟ್‌ನವರನ್ನೂ ಕನ್ಸಲ್ಟ್ ಮಾಡುತ್ತೇವೆ, ಮೊನ್ನೆ ಸದಸ್ಯರಾದ ಲಕ್ಷ್ಮೀಸಾಗರ್‌ರವರನ್ನು ಕನ್ಸಲ್ಟ್ ಮಾಡುತ್ತೇವೆ. ಹಾಗೆ ಮಾಡದೇ ಇದ್ದರೆ ನಮ್ಮ ಮಂಡ್ಯ ಡಿಸ್ಟ್ರಿಕ್ಟ್‌ಗೇ ಹೆಚ್ಚಿನ ರೀತಿಯಲ್ಲಿ ತೊಂದರೆಯಾಗುತ್ತವೆ.

MR. DEPUTY SPEAKER.—He has agreed.

SRI M.C. NANAIAH.—The point is this. Under the Tree protection Act the Divisional Forest Officer has got unlimited power to refuse permission to fell any tree in any portion. Now that authority can be exercised by the Divisional Forest Officer even if there is a High court order, because High court order is subject to rules and regulations.....

ಶ್ರೀ ಜಿ. ಮಾದೇಗೌಡ.—ಪರ್ಮಿಷನ್ ಕೊಟ್ಟಿಲ್ಲವೆಂದು ಹೇಳಿದೆ.

SRI M.C. NANAIAH.—Invoke it; the matter ends. No body can challenge in any Court. That I can assure you.

SRI K.H. SRINIVAS.—You have ample powers under the Act.

MR. DEPUTY SPEAKER.—Now we will take up Legislativ Business.

LEGISLATIVE BUSINESS

THE KARNATAKA COURT FEES AND SUITS VALUATION (AMENDMENT) BILL, 1981.

Motion to Consider

SRI Y. RAMAKRISHNA (Minister for Law and Parliamentary Affairs and Veterinary and Animal Husbandry) Sir, I beg to move.

"That the Karnataka Court Fees and Suits Valuation (Amendment) Bill, 1981 be taken into consideration."

The question was proposed

SRI Y. RAMAKRISHNA.—Sir, this is a very simple amendment I am moving to the Karnataka Court Fees and Suits Valuation Act. According to the Karnataka Court Fees and Suits Valuation Act, 1958 inrespect of suits filed under Section 14 of the Religious Endowments Act, 1863 or under Section 91 or 92 of the Code of Civil Procedure which is a similar Act dealing with the Religious and Charitable Acts different procedures have been followed. The Court fee payable is a fixed fee of Rs. 50/- under Section 91 and 92 whereas under Section 50 of the Bombay Public Trusts Act which involves the same principle as adumbrated in Section 91 and 92 no such fixed fee has been prescribed. It is purely ad valorem. Now it has come to our light and we have rectified that by saying that, even the suits coming